ವಿಜಯಪುರ | ಸಂಪುಟ 04 | ಸಂಚಿಕೆ 93 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ರವಿವಾರ, ಜೂನ್, 28, 2026



ನಾನು ಬಿಡದಿ ಟೌನ್ ಶಿಪ್ ವಿಚಾರವನ್ನು ವೈಯಕ್ತಿಕ ಪ್ರತಿಷ್ಠೆಯ ವಿಚಾರವಾಗಿ ತೆಗೆದುಕೊಂಡಿಲ್ಲ. 2007ನೇ ಇಸವಿ ಜುಲೈ 30–31 ಡಿ ಕೆ ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು ಏನೇನು ಮಾತನಾಡಿದರು ಅದಕ್ಕೆ ನಾನು ಅಸೆಂಬ್ಲಿಯಲ್ಲಿ ಏನು ಉತ್ತರ ಕೊಟ್ಟಿದ್ದೇನೆ ಎಂಬುದು ದಾಖಲಾಗಿದೆ."

■ ಹೆಚ್ ಡಿ ಕುಮಾರಸ್ವಾಮಿ
ಕೇಂದ್ರ ಸಚಿವರು

### ಅಪಪ್ರಚಾರ ಮಾಡುವವರಿಗೆ ದೇವರೇ ಬುದ್ಧಿ ಕೊಡಲಿ । ಧರ್ಮಸ್ಥಳದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸ್ಪಷ್ಟನೆ

# ಡಿಕೆಶಿ ಜೊತೆ ಯಾವುದೇ ವ್ಯವಹಾರಿಕ, ಆತ್ಮೀಯತೆಯಿಲ್ಲ



ಧರ್ಮಸ್ಥಳ: ಈ ಪವಿತ್ರ ಕ್ಷೇತ್ರದಲ್ಲಿ ನಿಂತು ಮಾತನಾಡುತ್ತಿದ್ದೇನೆ, ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರೊಂದಿಗೆ ಯಾವುದೇ ರೀತಿಯ ವ್ಯವಹಾರಿಕ, ಆತ್ಮೀಯತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶುಕ್ರವಾರ ಸ್ಪಷ್ಟನೆ ನೀಡಿದ್ದಾರೆ.

ದೆಹಲಿ ಪ್ರವಾಸ ಮುಗಿಸಿ ಶುಕ್ರವಾರ ನೇರವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿದ ಬಿ.ವೈ. ವಿಜಯೇಂದ್ರ ಅವರು, ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಇತ್ತೀಚೆಗೆ ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನ ವಿವಾದದ ಬೆನ್ನಲ್ಲೇ ಅವರ ಈ ಭೇಟಿ ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಸಿ ಶಾಸಕರಿಂದ ಆಣೆ-ಪ್ರಮಾಣ ಮಾಡಿಸಲು ಆರಂಭದಲ್ಲಿ ಯೋಜಿಸಲಾಗಿತ್ತು. ಆದರೆ ಪವಿತ್ರ ಕ್ಷೇತ್ರದಲ್ಲಿ ರಾಜಕೀಯ ಕಾರ್ಯಕ್ರಮ ನಡೆಸುವ ವಿಚಾರಕ್ಕೆ ಪಕ್ಷದ ಹಿರಿಯ ನಾಯಕರಿಂದಲೇ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಆ ಯೋಜನೆಯನ್ನು ಕೈಬಿಡಲಾಯಿತು.

ಈ ಬೆಳವಣಿಗೆಯ ನಂತರ ವಿಜಯೇಂದ್ರ ಅವರು ಒಬ್ಬರೇ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಂಜುನಾಥ ಸ್ವಾಮಿಯ ದರ್ಶನ ಪಡೆದ್ದಾರೆ. ಈ ವೇಳೆ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಸೇರಿದಂತೆ ಕರಾವಳಿ ಭಾಗದ ಹಲವು ಬಿಜೆಪಿ ಶಾಸಕರು ಉಪಸ್ಥಿತರಿದ್ದರು.

## ಅಡ್ಡ ಮತದಾನ: ತನಿಖಾ ವರದಿ ಸಲ್ಲಿಸಿದ ಸಿಟಿ ರವಿ



ಬೆಂಗಳೂರು: ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಪ್ರಕರಣದ ತನಿಖೆ ನಡೆಸಿದ ಸಿಟಿ ರವಿ ನೇತೃತ್ವದ ಸತ್ಯಶೋಧನಾ ಸಮಿತಿ ಇಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದೆ.

ಪರಿಷತ್ ಸದಸ್ಯ ಸಿ.ಟಿ ರವಿ, ಶಾಸಕ ಮಹೇಶ್ ಟೆಂಗಿನಕಾಯಿ ಹಾಗೂ ಎನ್ ಮಹೇಶ್ ನೇತೃತ್ವದ ತ್ರಿಸದಸ್ಯ ಸಮಿತಿಯು ಆಂತರಿಕ ಸತ್ಯಶೋಧನೆ ನಡೆಸಿ, ಸಾಂದರ್ಭಿಕ ಸಾಕ್ಷಿ, ಶಂಕೆ, ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಹಾಗೂ ಅನುಮಾನ ಇದ್ದ ಶಾಸಕರಿಂದ ಪಡೆದ ಮಾಹಿತಿ ಆಧರಿಸಿ ವರದಿ ಸಿದ್ಧಪಡಿಸಿದ್ದಾರೆ.

ಈ ಮಧ್ಯಂತರ ವರದಿಯನ್ನು ಬಿಜೆಪಿ ಕಚೇರಿಯಲ್ಲಿ ಸಲ್ಲಿಕೆ ಮಾಡಿದ್ದು, ಬಳಿಕ ಬಿವೈವಿ ಹಾಗೂ ಸಿಟಿ ರವಿ ಇಬ್ಬರೂ ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದಾರೆ.

ನಾಲ್ಕು ದಿನಗಳ ಕಾಲ ಆಂತರಿಕ ತನಿಖೆ ನಡೆಸಿದ ಸಮಿತಿಯು ಒಟ್ಟು ಮೂರು ಪುಟಗಳ ವರದಿಯನ್ನು ಸೀಲ್ಡ್ ಕವರ್‌ನಲ್ಲಿ ಸಲ್ಲಿಕೆ ಮಾಡಿದೆ. ಮೈತ್ರಿ ಪಕ್ಷಗಳಿಂದ ಒಟ್ಟು 12 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಈ ಪೈಕಿ 1 ಅಸಿಂಧು ಮತ. ಬಿಜೆಪಿಯಿಂದ 1 ಅಸಿಂಧು ಮತ ಸೇರಿ ಒಟ್ಟು 4 ಅಡ್ಡಮತ ಆಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದರ ಹೊರತಾಗಿ ಉಳಿದ ಅಡ್ಡ ಮತಗಳು ಜೆಡಿಎಸ್‌ನಿಂದಾಗಿವೆ. ವರದಿಯಲ್ಲಿ ಅಡ್ಡ ಮತ ಚಲಾಯಿಸಿದ ಶಾಸಕರ ಹೆಸರು ಉಲ್ಲೇಖಿಸಿಲ್ಲ ಎನ್ನಲಾಗಿದೆ.

# ಲೈನ್‌ಮ್ಯಾನ್ ನಿರ್ಲಕ್ಷ್ಯಕ್ಕೆ ರೈತ ಬಲಿ!

■ ಉದಯರಶ್ಮಿ ದಿನಪತ್ರಿಕೆ



ಅಫಜಲಪುರ: ಲೈನ್‌ಮ್ಯಾನ್ ನಿರ್ಲಕ್ಷ್ಯದಿಂದ ರೈತ ಬಲಿಯಾದ ದಾರುಣ ಘಟನೆ ಅಫಜಲಪುರ ತಾಲ್ಲೂಕಿನ ಅಳ್ಳಗಿ (ಕೆ) ಗ್ರಾಮದಲ್ಲಿ ನಡೆದಿದೆ.

ವಿದ್ಯುತ್ ತಂತಿ ತಗುಲಿ ರೈತ ಬಸಪ್ಪ ಮಹಾದೇವಪ್ಪ ಪೂಜಾರಿ ಅವರು ಸ್ಥಳದಲ್ಲೇ ದುರ್ಮರಣ ಹೊಂದಿದ್ದಾರೆ.

ಘಟನೆಗೆ ಹೊಣೆಗಾರರಾದ ಲೈನ್‌ಮ್ಯಾನ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಮೃತರ ಕುಟುಂಬಕ್ಕೆ ಸಮರ್ಪಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತು.

ಸುಮಾರು 5 ಗಂಟೆಗಳ ಕೆಂತಲು ಹೆಚ್ಚು ಕಾಲ ರಸ್ತೆಗೆತಗೊಳಿಸಿರುವುದರಿಂದ ಸಂಚಾರ ಅಸ್ತವ್ಯಸ್ತಗೊಂಡಿತ್ತು, ಮಹಾರಾಷ್ಟ್ರದಿಂದ ಗಾಣಗಾಪುರ ತೆರಳುವ ಯಾತ್ರಿಕರಿಗೆ ಹಾಗೂ ಸೊಲ್ಲಾಪುರ ಕಲಬುರಗಿ ವಿಜಯಪುರ ಮುಂತಾದ ನಗರಗಳಿಗೆ ತೆರಳುವ ಎಲ್ಲಾ ಪ್ರಯಾಣಿಕರಿಗೆ ತೊಂದರೆ ಉಂಟಾಯಿತು.



## ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸೇತುವೆಯಾದ ಮೊಹರಂ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಮೊಹರಂ ಉತ್ತರ ಕರ್ನಾಟಕ ಭಾಗದಲ್ಲಿ ಭಾವೈಕ್ಯತೆಯ ಸೇತುವೆಯಾಗಿದೆ. ಮುಸ್ಲಿಮರ ಹೊಸ ವರ್ಷದ ಹಬ್ಬ ಮೊಹರಂ. ಮೊಹರಂ ಇಲ್ಲಿ ಕೇವಲ ಮುಸ್ಲಿಂ ಬಾಂಧವರ ಹಬ್ಬವಾಗಿರದೇ ಹಿಂದೂ ಮುಸಲ್ಮಾನರು ಒಟ್ಟಾಗಿ ಮೊಹರಂ ಆಚರಿಸಿ ಭಾವೈಕ್ಯತೆಯ ಹಬ್ಬವನ್ನಾಗಿ ಮಾಡಿದ್ದಾರೆ.

ಮೊಹರಂದ ಕೊನೆಯ ದಿನವಾದ ಶುಕ್ರವಾರದಂದು ನಸುಕಿನ ಜಾವ 5 ಗಂಟೆಗೆ ರೇವತಗಾಂವ ಗ್ರಾಮದಲ್ಲಿ ಹಸೇನ್ ಹಾಗೂ ಹುಸೇನ್ ದೇವರು ಬೇಬಿ ಫಾತೀಮಾ ದೇವರ ಡೋಲಿಯೊಂದಿಗೆ ಸಂಪ್ರದಾಯದ ಪ್ರಕಾರ ಗ್ರಾಮದ ಅಣ್ಣಾರಾಯ ಸಿದ್ಧನಗೌಡ ಪಾಟೀಲರ ಮನೆಗೆ ಭೇಟಿ ನೀಡಿ ಆದರಾತಿಥ್ಯವನ್ನು ಸ್ವೀಕರಿಸಿದ ನಂತರ ಲಾಲಸಾಬ ದೇವರ ಡೋಲಿಯನ್ನು ಮಸೀದಿಯಲ್ಲಿ ಕುಳ್ಳರಿಸಿ ನಂತರ ಗ್ರಾಮದ ಎಲ್ಲ ಭಕ್ತರ ಮನೆ ಮನೆಗಳಿಗೆ ಹಸೇನ್–ಹುಸೇನ್ ದೇವರು ಭೇಟಿ ನೀಡಿ ಪೂಜೆಯನ್ನು ಸ್ವೀಕರಿಸಿ ಮಸೀದಿಗೆ ಮರುಳಿದರು.

ನಂತರ ಸಾಯಂಕಾಲ 4 ಗಂಟೆಗೆ ಭಕ್ತರಿಂದ ಚೌಂಕಿ ನೇವೈದ್ಯ ಅರ್ಪಿಸಲಾಯಿತು. ಸಾಯಂಕಾಲ 4:30 ಗಂಟೆಗೆ ಕರಬಲ್ ರಿವಾಯತ್ ಪದಗಳು ಮತ್ತು ಕರಬಲ್ ಆಟಗಳು, ಕರಡಿ ಕುಣಿತ ಜರುಗಿದವು. ಸಾಯಂಕಾಲ 5 ಗಂಟೆಗೆ ಹಸನ್ ಹಾಗೂ ಹುಸೇನ್ ದೇವರು ಗ್ರಾಮದ ಭಕ್ತರ ಮನೆ ಮನೆಗೆ ತೆರಳಿ ದರ್ಶನ ನೀಡಿದರು.

6 ಗಂಟೆಗೆ ಹಸೇನ್–ಹುಸೇನ್ ದೇವರ ಭೇಟಿ, ಡೋಲಿ ಭೇಟಿ ಕಾರ್ಯಕ್ರಮ ನಡೆಯಿತು. ಈ ವೇಳೆ ಕೆಲವು ಭಕ್ತರು ಕಟ್ಟಿಕೊಂಡಿದ್ದ ಲಾಡಿಗಳನ್ನು ಡೋಲಿಯ ಮೇಲೆ ಎಸೆದರೆ ಇನ್ನೂ ಕೆಲವರು ಚುರುಮುರಿ, ಶೇಂಗಾ, ಖಾರೀಕ್, ಬದಾಮ ಸೇರಿದಂತೆ ಇತರ ತಿನಿಸುಗಳನ್ನು ಎಸೆದು ತಮ್ಮ ಹರಕೆಯನ್ನು ತೀರಿಸಿದರು. ರಾತ್ರಿ 7:30ಕ್ಕೆ ದೇವರ ದಫನ್ ಕಾರ್ಯ ನಡೆಯಿತು.

### ಕುಡಿಯುವ ನೀರಿನ ಸಮಸ್ಯೆ ಕುರಿತು ನಡೆದ ಟಾಸ್ಕಫೋರ್ಸ ಸಭೆಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ್ ಅಧಿಕಾರಿಗಳಿಗೆ ಎಚ್ಚರಿಕೆ

# ಕುಡಿವ ನೀರಿನ ಸಮಸ್ಯೆಯಾದರೆ ಪಿಡಿಓಗಳೇ ನೇರ ಹೊಣೆಗಾರರು

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಮತಕ್ಷೇತ್ರದ ಯಾವುದೇ ಗ್ರಾಮದಲ್ಲೂ ಕುಡಿಯುವ ನೀರಿನ ತೊಂದರೆ ಉಂಟಾಗಬಾರದು. ಒಂದು ವೇಳೆ ನೀರಿನ ಸಮಸ್ಯೆ ತಲೆದೋರಿದರೆ ಅದಕ್ಕೆ ಸಂಬಂಧಪಟ್ಟ ಪಿಡಿಓಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು," ಎಂದು ಶಾಸಕ ಯಶವಂತರಾಯಗೌಡ ಪಾಟೀಲ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.ಅವರು ನಗರದ ತಾಲೂಕಾ ಪಂಚಾಯತ್ ಸಭಾಭವನದಲ್ಲಿ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಕುರಿತು ನಡೆದ ಟಾಸ್ಕಫೋರ್ಸ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಸಾರ್ವಜನಿಕರಿಗೆ ಯಾವುದೇ ಕಾರಣಕ್ಕೂ ನೀರಿನ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗ್ರಾಪಂ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತಲೆದೋರಿದರೆ ಗ್ರಾಮ ಪಂಚಾಯತ್ ಪಿಡಿಓ ಹಾಗೂ ನೋಡೆಲ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ನೀರಿನ ಮೂಲಗಳು ಬತ್ತಿ ಹೋಗಿದ್ದರೆ, ತಕ್ಷಣವೇ ಗ್ರಾಮೀಣ ಭಾಗದ ಖಾಸಗಿ ಜಮೀನುಗಳನ್ನು ಅಥವಾ ರೈತರ ನೀರಾವರಿ ಮೂಲಗಳನ್ನು ಗುರುತಿಸಬೇಕು. ಗುರುತಿಸಲಾದ ಖಾಸಗಿ ನೀರಿನ ಮೂಲಗಳಿಂದ ಬಾಡಿಗೆ ರೂಪದಲ್ಲಿ ನೀರನ್ನು ಪಡೆದು, ತಕ್ಷಣವೇ ಸಾರ್ವಜನಿಕರ ಸಮಸ್ಯೆಯನ್ನು ಪರಿಹರಿಸಬೇಕು. ಅವಶ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಿ ಎಂದು ತಿಳಿಸಿದರು.

ಪ್ರತೀ ಸೋಮವಾರ ಅಧಿಕಾರಿಗಳು ಟಾಸ್ಕಫೋರ್ಸ ಸಭೆ ನಡೆಸಿ ಗ್ರಾಮ ಆಡಳಿತ ಅಧಿಕಾರಿಗಳಯ ಸಹ ಗ್ರಾ.ಪಂ ಅಧಿಕಾರಿಗಳೊಂದಿಗೆ ಕೈ ಜೋಡಿಸಿ ವಾಸ್ತವವಾಗಿ ಎಲ್ಲಿ ಸಮಸ್ಯೆ ಇದೆ ಎಂಬುದನ್ನು ಕಂಡುಕೊಂಡು ಪ್ರತೀ ವಾರ ಸಭೆಗೆ ತಿಳಿಸಬೇಕೆಂದು ಶಾಸಕರು ಸೂಚಿಸಿದರು.

ತೆಗ್ಗೆಳ್ಳಿ ಗ್ರಾಮದಲ್ಲಿ ನೀರಿನ ಸಮಸ್ಯೆ ಇತ್ತು. ಈಗ ಏನಾಗಿದೆ ಎಂದು ಶಾಸಕರು ಪ್ರಶ್ನಿಸುತ್ತಿದ್ದಂತೆ ಉತ್ತರಿಸಿದ ತಾ.ಪಂ ಇಓ ಮಹಾದೇವಪ್ಪ ಏವೂರ ಈಗಾಗಲೆ ಗ್ರಾಮದಲ್ಲಿ ಒಂದು ಬೋರವೆಲ್ ಕೊರೆಸಿ ನೀರಿನ ಸಮಸ್ಯೆ ಬಗೆಹರಿಸಲಾಗಿದೆ ಎಂದು ತಿಳಿಸಿದರು.

ತಾಲೂಕಿನ ಯಾವುದೇ ವಸತಿ ನಿಲಯ, ಸರಕಾರಿ ಶಾಲಾ ಕಾಲೇಜುಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಹೊರ್ತಿ ಗ್ರಾಮದ ಮುರಾರ್ಜಿ ದೇಸಾಯಿ ಬಾಲಕರ ವಸತಿ ನಿಲಯದಲ್ಲಿ ನೀರಿನ ಸಮಸ್ಯೆ ಇದೆ. ಅದನ್ನು ಕೂಡಲೆ ಪರಿಹರಿಸಿ, ತೊಂದರೆ ನೀಗಿಸಲು ಏನು ಅವಶ್ಯಕತೆ ಇದೆ ಎಂಬುದನ್ನು ತಿಳಿದುಕೊಂಡು ಒಂದು ಅಂದಾಜು ಪತ್ರಿಕೆ ಸಿಧ್ಧಪಡಿಸಿ ಅಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಯೋಜನೆ ರೂಪಿಸಿ ಎಂದು ತಾಲೂಕಾ ಪಂಚಾಯತ್ ಇಓ ಹಾಗೂ ಗ್ರಾಮೀಣ ಕುಡಿಯುವ ನೀರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ವೇದಿಕೆಯಲ್ಲಿ ಕಂದಾಯ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ, ತಾ.ಪಂ ಇಓ ಮಹಾದೇವಪ್ಪ ಏವೂರ ಇದ್ದರು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಎಸ್.ಆರ್. ಬಂಡಿ, ಕೆಬಿಜೆಎನ್‌ಎಲ್ ಅಧಿಕಾರಿ ಗೋವಿಂದ ರಾಠೋಡ, ಜಿ.ಪಂ. ಅಧಿಕಾರಿ ಶಿವಾಜಿ ಬನಸೋಡೆ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಆರ್. ನಡಗಡ್ಡಿ, ಎಸ್.ಆರ್ ಮೇಡೇದಾರ, ರಾಜೇಶ ಹೂಗಾರ, ಉಮೇಶ ಲಮಾಣಿ, ಎಸ್.ಆರ್. ಗದ್ಯಾಳ, ಮಂಜುನಾಥ ಧೂಳೆ, ದಯಾನಂದ ಮಠ, ಪ್ರದೀಪ ಭಿಸೆ, ಸೇರಿದಂತೆ ಇನ್ನಿತರರು ಇದ್ದರು.



## ಬೆಂಗಳೂರಿಗೆ ಭದ್ರ ಬುನಾದಿ ಹಾಕಿದ ಕೆಂಪೇಗೌಡರು :ಶಾಸಕ ಅನಿಲ್

■ ಉದಯರಶ್ಮಿ ದಿನಪತ್ರಿಕೆ

ಎಚ್.ಡಿ.ಕೋಟೆ: ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ಸಿಲಿಕಾನ್ ಸಿಟಿ, ಉದ್ಯಾನ ನಗರಿಯಾಗಿ, ಕರ್ನಾಟಕದ ರಾಜಧಾನಿ ಜೊತೆಗೆ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದು ಇಡೀ ದೇಶವೆ ಬೆಂಗಳೂರು ಕಡೆ ತಿರುಗುವಂತೆ ಭದ್ರ ಬುನಾದಿ ಹಾಕಿ ಕೊಟ್ಟಿರುವುದಕ್ಕೆ ಎಲ್ಲರೂ ಹೆಮ್ಮೆ ಪಡುವಂತಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜನೆ ಮಾಡಿದ ನಾಡಪ್ರಭು ಕೆಂಪೇಗೌಡ ಅವರ 517ನೇ ಜಯಂತಿಯ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಬೆಂಗಳೂರು ನಗರದಲ್ಲಿ ಸುಮಾರು ಒಂದುವರೆ ಕೋಟಿ ಜನಸಂಖ್ಯೆ ಇದೆ. ಹಳ್ಳಿಯಿಂದ ಬೆಂಗಳೂರಿಗೆ ಹೋದವರು ಉದ್ಯೋಗ ಪಡೆದು ಉತ್ತಮ ಜೀವನವನ್ನು ಮಾಡಬಹುದು. ನಮ್ಮ ತಂದೆ ದಿ. ಚಿಕ್ಕಮಾದು ಅವರು ಶಾಸಕರಾಗಲು ಒಕ್ಕಲಿಗ ಸಮುದಾಯ ಪ್ರಮುಖ ಕಾರಣ. ನಾನು ತಾಲೂಕಿನಲ್ಲಿ ಎಂದಿಗೂ ರಾಜಕಾರಣ ಮಾಡುತ್ತಿಲ್ಲ ಬದಲಾಗಿ ಜನಸೇವೆ ಮಾಡುತ್ತಿದ್ದೇನೆ. ಒಕ್ಕಲಿಗ ಸಮುದಾಯದ ನಾಯಕರು ವಿಧಾನಸೌಧ, ಸುವರ್ಣ ಸೌಧವನ್ನು ಕಟ್ಟಿದವರು. ತಾಲೂಕಿನ ಬಹುಮುಖ್ಯ ಬೇಡಿಕೆಯಾದ ಕೆಂಪೇಗೌಡರ ಭವನವನ್ನು ನಿರ್ಮಿಸಲು ಈಗಾಗಲೇ 32 ಕುಂಟೆ ಜಾಗವನ್ನು ಸಂತೆಮಾಳದಲ್ಲಿ ಕೂಡುವುದಾಗಿ ಹೇಳಿದ್ದೆ. ಆದರೆ ಡಾಕ್ಯುಮೆಂಟ್ ಸಮಸ್ಯೆಗಳು ಇದ್ದು ಬೇರೆ ಸೂಕ್ತವಾದ ಸ್ಥಳದಲ್ಲಿ ಜಾಗವನ್ನು ಮಂಜೂರು ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು..

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಹರೀಶ್ ಗೌಡ ಮಾತನಾಡಿ, ಕೆಂಪೇಗೌಡರು ಒಂದು ಜನಾಂಗಕ್ಕೆ ಸೀಮಿತವಾದವರಲ್ಲ. ಅವರು ಸರ್ವ ಜನಾಂಗದ ನಾಯಕ ಎಂದರು.

ನಾಡಪ್ರಭು ಕೆಂಪೇಗೌಡರ ಹುಟ್ಟು ಜೀವನ ಸಾಧನೆಯ ಬಗ್ಗೆ ಪ್ರಾಧ್ಯಾಪಕ ಎಸ್.ಪಿ. ಪ್ರಕಾಶ್ ವಿಚಾರ ಮಂಡಿಸಿದರು.

ತಹಶೀಲ್ದಾರ್ ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಇಓ ರವಿಚಂದ್ರ, ಮೈಮುಲ್ ಮಾಜಿ ಅಧ್ಯಕ್ಷ ಕೆ. ಈರೇಗೌಡ, ಕೃಷ್ಣೆಗೌಡ, ಶಂಬೇಗೌಡ, ಪ್ರಕಾಶ್, ಭಾಸ್ಕರ್, ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಸುರೇಂದ್ರೇಗೌಡ,ನಟರಾಜು, ಬಾಲಕೃಷ್ಣ,ನಟರಾಜು, ಸೋಮಣ್ಣ, ಪುಟ್ಟೇಗೌಡ, ಶಿವರಾಜ್, ಮಾದೇಗೌಡ, ದೇವೇಗೌಡ, ರವಿ, ಗಣೇಶ್, ಪ್ರಕಾಶ್ ಗೆಂಡತ್ತೂರು, ಬೈರೇಗೌಡ, ತಮ್ಮಣ್ಣ, ನಾಗರಾಜ್, ಮಹೇಶ್, ನಾಗರಾಜ್, ವೇಣು, ಲೋಕೇಶ್, ಮಹದೇವು, ಗಿರಿ, ಜಯರಾಂ, ಮಹದೇವು, ಸತೀಶ್, ಕೃಷ್ಣೇಗೌಡ, ಚಂದ್ರೇಗೌಡ, ಮಹೇಂದ್ರ, ಚಲುವರಾಜು, ಶಿಕ್ಷಕಿ ರೂಪ, ಶಿವಯ್ಯ, ಶಿವಕುಮಾರ್, ಸೇರಿದಂತೆ ಒಕ್ಕಲಿಗ ಸಮುದಾಯದ ಮುಖಂಡರು ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ವಿದ್ಯುತ್ ವ್ಯವಸ್ಥೆ ಸರಿಪಡಿಸಲು ಆಗ್ರಹಿಸಿ ರೈತಸಂಘದಿಂದ ಮನವಿ

■ ಉದಯರಶ್ಮಿ ದಿನಪತ್ರಿಕೆ




ದೇವರಹಿಪ್ಪರಗಿ: ಜಾಲವಾದ ಸಹಿತ ಬೂದಿಹಾಳ ಡೋಣ ಗ್ರಾಮಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನ ವ್ಯತ್ಯಾಸದಿಂದಾಗಿ ಟಿ.ಸಿ ಹಾಗೂ ರೈತರ ಪಂಪಸೆಟ್, ಮೋಟಾರ್‌ಗಳಿಗೆ ಹಾನಿಯಾಗುತ್ತಿದ್ದು ಕೂಡಲೇ ಕ್ರಮ ಕೈಗೊಳ್ಳಲು ಆಗ್ರಹಿಸಿ ರಾಷ್ಟ್ರೀಯ ರೈತಸಂಘದ ಸದಸ್ಯರು ಹೆಸ್ಕಾಂ ಎಇಇ ಸತೀಶ ಸುಲಾಖೆ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಹೆಸ್ಕಾಂ ಕಚೇರಿಗೆ ಗುರುವಾರ ಆಗಮಿಸಿದ ರೈತರು ವಿದ್ಯುತ್ ಅಸಮರ್ಪಕ ಸರಬರಾಜಿನ ಕುರಿತು ಹೆಸ್ಕಾಂ ಸಿಬ್ಬಂದಿಯ ಗಮನ ಸೆಳೆದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ರೈತಸಂಘದ ರಾಜ್ಯ ಮಹಿಳಾ ಕಾರ್ಯದರ್ಶಿ ರೇಣುಕಾ ಪಾಟೀಲ ಮಾತನಾಡಿ, ಜಾಲವಾದ ಎಪಿಯ ಮೇಲೆ ಹೆಚ್ಚು ಒತ್ತಡ ಉಂಟಾಗುವುದರ ಕಾರಣ ಎರಡು ಸರದಿಯ ಪ್ರಕಾರ ವಿದ್ಯುತ್ ಪೂರೈಕೆ ಮಾಡಬೇಕು. ಇದರಿಂದ ರೈತರಿಗೆ ಅನುಕೂಲವಾಗುವುದರ ಜೊತೆಗೆ ಅವರ ವ್ಯಾಪ್ತಿಯ ಟಿಸಿ ಹಾಗೂ ಮೋಟಾರ್, ಪಂಪಸೆಟ್ ಗಳು ಸುರಕ್ಷಿತವಾಗಿರುತ್ತವೆ. ಜೊತೆಗೆ ಅನಗತ್ಯವಾಗಿ ಹೆಸ್ಕಾಂ ಸಿಬ್ಬಂದಿಗೆ ಫೋನ್ ಮಾಡುವುದು ತಪ್ಪಿದಂತಾಗುತ್ತದೆ. ಒಂದು ವೇಳೆ ರೈತರ ಮನವಿಗೆ ಸ್ಪಂದಿಸದೇ ಸರಿಯಾಗಿ ವಿದ್ಯುತ್ ಪೂರೈಕೆ ಮಾಡದೇ ಇದ್ದಲ್ಲಿ ರೈತರು ಮುಂದಿನ ಹೋರಾಟಕ್ಕೆ ಇಳಿಯುವುದು ಅನಿವಾರ್ಯ ಎಂದರು.

ಹಣಮಂತ್ರಾಯ ಉಕ್ಕಲಿ, ದಾದಾಗೌಡ ಬಿರಾದಾರ, ಸಿದ್ದು ಇಜೇರಿ, ನಾನಾಗೌಡ ಬಿರಾದಾರ, ಚಿದಾನಂದ ಗೊಳಸಾರ, ಮಹಾಂತೇಶ ಬಿರಾದಾರ, ಶಂಕ್ರಪ್ಪ ಸತ್ಯಪ್ಪಗೋಳ, ಶಂಕರಗೌಡ ಬಿರಾದಾರ, ಪ್ರಶಾಂತ ಹಿಪ್ಪರಗಿ ಶರಣಗೌಡ ಬಿರಾದಾರ, ಅಭಿಷೇಕ ಸಾವಳಗಿ, ಚಂದ್ರಶೇಖರ ಕುಂಬಾರ ಇದ್ದರು.

# ಮುಗ್ಧ ಮನಸ್ಸಿನ ಹೂಗಳು ಅರಳುವಂತಾಗಲಿ...



■ ಉದಯರಶ್ಮಿ ದಿನಪತ್ರಿಕೆ

**ಭಾವರಶ್ಮಿ**

ಮಾರ್ಕಸ್ ಆಂಟ್ಯಾನಿಯೋಸ್ ಅವರು, “ಸಂತೋಷ ಎಂಬುದು ಎಲ್ಲೂ ಇಲ್ಲ. ಅದು ನಮ್ಮ ಒಳ್ಳೆಯ ಆಲೋಚನೆಯ ಮೇಲೆ ನಿಂತಿದೆ” ಎಂದು ಹೇಳಿದ್ದಾರೆ. ಇಂದು ಮಕ್ಕಳ ಮನಸ್ಥಿತಿಯನ್ನು ಅರಿಯುವುದು ಬಹಳ ಕಷ್ಟಕರವಾಗಿದೆ. ಪಾಲಕರು ಮತ್ತು ಪೋಷಕರು 10–15 ವರ್ಷದ ಮಕ್ಕಳಲ್ಲಾಗುವ ದೈಹಿಕ, ಭಾವನಾತ್ಮಕ ಬದಲಾವಣೆಯನ್ನು ತುಂಬಾನೇ ಜಾಗರೂಕತನದಿಂದ ಗಮನಿಸುತ್ತಾ, ವಯಸ್ಸಿಗೆ ಅಗತ್ಯವಿರುವ ಬುದ್ದಿಮಾತುಗಳನ್ನು ಹೇಳುತ್ತಿರಬೇಕು. ಅವರು ಶಾಲೆಯಲ್ಲಿ, ಮನೆಯಲ್ಲಿ ಮತ್ತು ಹೊರಗಡೆ ಹೇಗಿರುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ಅರಿತುಕೊಳ್ಳಬೇಕು. ಶಾಲೆಯಿಂದ ಮನೆಗೆ ಬಂದ ನಂತರ ಅವರ ಇಂದಿನ ದಿನಚರಿ, ಶಾಲೆಯಲ್ಲಿನ ಪಾಠ–ಪ್ರವಚನ, ಸಂವಾದ ಮತ್ತು ಅನುಭವಿಸಿದ ಘಳಿಗೆಗಳ ಬಗ್ಗೆ ಆಲಿಸಬೇಕು. ಯಾವುದೇ ಸಮಸ್ಯೆ–ತೊಂದರೆ ಇದ್ದರೆ ಅದರ ಬಗ್ಗೆ



ತಿಳಿದುಕೊಳ್ಳಬೇಕು. ಎಂತಹ ಪರಿಸ್ಥಿತಿ ಎದುರಾದರೂ ನಿಮ್ಮ ಜೊತೆ ನಾವಿದ್ದೇವೆ ಎಂಬ ಆತ್ಮವಿಶ್ವಾಸವನ್ನು ಮೂಡಿಸಬೇಕು. ಪ್ರತಿಯೊಂದು ಸಮಸ್ಯೆಗೆ ಸೂಕ್ತ ಪರಿಹಾರ ಇದ್ದೇ ಇರುತ್ತದೆ ಎಂಬುದನ್ನು ತಮ್ಮ ಜೀವನದ ಎದುರಾದ ಸಮಸ್ಯೆಗಳ ಬಗ್ಗೆ ನಿದರ್ಶನ ನೀಡುತ್ತಾ, ಸದಾ ಅವರೊಂದಿಗೆ ನಿಲ್ಲುತ್ತೇವೆಂಬ ಭರವಸೆಯನ್ನು ಮನದಲ್ಲಿ ಬಿತ್ತಬೇಕು. ಕೊಂಚ ಎಚ್ಚರ ತಪ್ಪಿದರೂ ಮಕ್ಕಳು ಹಾದಿ ತಪ್ಪುವ ಸಾಧ್ಯತೆ ಹೆಚ್ಚು. ಮೊನ್ನೆ ಘಾಜಿಯಾಬಾದ್‌ನಲ್ಲಿ ಮೂರು ಸಹೋದರಿಯರು ತೀವ್ರ ಒಂಟಿತನ, ಸಾಮಾಜಿಕ ಸಂಪರ್ಕದ ಕೊರತೆ ಮತ್ತು ಭಾವನಾತ್ಮಕ ಬೆಂಬಲದ ಅಭಾವ ಮತ್ತು ಮಾನಸಿಕ ದುರ್ಬಲತೆಯಿಂದ ಆತ್ಮಹತ್ಯೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ಇನ್ನೂ ಮನದಿಂದ ಮಾಸಿ ಹೋಗಿಲ್ಲ. ಈ ದುರಂತ ಪ್ರತಿ ಪೋಷಕ, ಶಿಕ್ಷಕ ಮತ್ತು ಸಮಾಜಕ್ಕೆ ಒಂದು ಗಂಭೀರ ಸ್ವರೂಪದ ಎಚ್ಚರಿಕೆ ಮತ್ತು ಸಂದೇಶವನ್ನು ನೀಡುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಪೋಷಕರು ಮಕ್ಕಳೊಂದಿಗೆ ಉತ್ತಮ ಭಾವನಾತ್ಮಕ ಸಂಬಂಧ ಹೊಂದಲು ಕೆಲವು ಸಲಹೆಗಳು

ಮಕ್ಕಳ ಮಾನಸಿಕ ಬೆಳವಣಿಗೆಯನ್ನು ಅಗಾಗ್ಗೆ ಗಮನಿಸುತ್ತಿರಬೇಕು

ಕೇವಲ ಪರೀಕ್ಷೆಯಲ್ಲಿ ಅಂಕಗಳನ್ನು ಪಡೆಯುವುದು ಅಥವಾ ಉತ್ತಮ ಫಲಿತಾಂಶ ನಿರೀಕ್ಷಿಸುವುದು ಅಷ್ಟೇ ಅಲ್ಲ. ವಿದ್ಯಾರ್ಥಿಗಳ ಅಥವಾ ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಆಲೋಚನೆಯು ಶೈಕ್ಷಣಿಕ ಜ್ಞಾನದಷ್ಟೇ ಅವಶ್ಯಕವಾಗಿದೆ. ಭಾವನಾತ್ಮಕ ಬುದ್ದಿಮತ್ತೆಯಿಂದ ಪೋಷಕರು ತಮ್ಮ ಭಾವನೆಗಳನ್ನು ನಿಯಂತ್ರಿಸುವುದರ ಜತೆಗೆ ಮಕ್ಕಳ ಭಾವನೆಯನ್ನು ನಿರ್ವಹಿಸುವ, ಸಕಾರಾತ್ಮಕ ಸಂಬಂಧಗಳನ್ನು ಬೆಳೆಸುವ ಮತ್ತು ಸಮಸ್ಯೆ ಎದುರಿಸುತ್ತಿದ್ದಾಗ ಅಥವಾ ಕಠಿಣ ಪರಿಸ್ಥಿತಿ ಸಂದರ್ಭಗಳಲ್ಲಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಬಹುದು.

ಮಕ್ಕಳಲ್ಲಿ ಸ್ವಯಂ ಅರಿವು ಮೂಡಿಸುವುದು ಅಗತ್ಯ

ಮಕ್ಕಳು ಅಥವಾ ವಿದ್ಯಾರ್ಥಿಗಳು ಹಜ್ಜೆ ಹೆಜ್ಜೆಗೂ ಅನುಭವಿಸುವ ಮನಸ್ಥಿತಿಯನ್ನು ಗುರುತಿಸಿ, ಪರಿಣಾಮಕಾರಿ ಭಾವನಾತ್ಮಕ ಬುದ್ದಿಮತ್ತೆಯ ತಂತ್ರದಿಂದ ಯೋಗ, ವ್ಯಾಯಾಮ, ದೈಹಿಕ ಕಸರತ್ತು ಮತ್ತು ಕ್ರೀಡಾಸಕ್ತಿ ಬೆಳಸುವ ಜತೆಗೆ ದೈಹಿಕ, ಮಾನಸಿಕ ಮತ್ತು ಬೌದ್ಧಿಕವಾಗಿ ಬೆಳವಣಿಗೆ ಹೊಂದಲು ಪೂರಕ ಪರಿಸರ ನಿರ್ಮಿಸಬೇಕು. ಮಗು ತನ್ನ ಮನದಾಳದ ಮಾತು ಅಥವಾ ಮನದಿಂಗಿತ ಅಥವಾ ಭಾವನೆಗಳನ್ನು ಹಂಚಿಕೊಳ್ಳಲು ಉತ್ತಮ ಸ್ನೇಹಿತನಾಗಲು ಪ್ರಯತ್ನಿಸಬೇಕು.

ಮಕ್ಕಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಬಲಪಡಿಸಬೇಕು



ಏಕಾಗ್ರತೆಗಳಿಂದ ಮನಸ್ಸಿನ ಶಾಂತಿಯನ್ನು ಸ್ಥಿಮಿತಗೊಳಿಸಲು ಸಹಾಯಕಾರಿ. ಯಾವುದೇ ಸಮಸ್ಯೆ ತಲೆದೋರಿದಾಗ ಆತ್ಮಹತ್ಯೆಯಂತಹ ದುಸ್ಸಾಹಸಕ್ಕೆ ಕೈ ಹಾಕದೇ ದೃಢ ಆಲೋಚನೆಯಿಂದ ಸಮಸ್ಯೆಯನ್ನು ಎದುರಿಸುವ ಶಕ್ತಿಯ ಬಗ್ಗೆ ಅರಿವು ಮೂಡಿಸುವುದು. ಅವರು ಸ್ವಯಂ ಆಗಿ ತಮ್ಮ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಮನವರಿಕೆ ಮಾಡಿಕೊಡುವುದು ತುಂಬಾನೇ ಮುಖ್ಯ.

**ಪೋಷಕರು ಮಕ್ಕಳ ಸ್ನೇಹಿತರಂತಿರಬೇಕು**

ಪಾಲಕರು ಅಥವಾ ಪೋಷಕರು ಸದಾ ಮಕ್ಕಳ ಜೊತೆ ಅತಿಯಾಗಿ ಕಟ್ಟುನಿಟ್ಟಾಗಿರಬಾರದು. ಮಕ್ಕಳ ಜೊತೆಗೆ ಸ್ನೇಹಿರಂತೆ ವರ್ತಿಸಬೇಕು. ಅತಿಯಾದ ಶಿಸ್ತು ಕಲಿಸಲು ಹೋದರೆ ಅನಾಹುತಗಳೇ ಸಂಭವಿಸುತ್ತವೆ ಎನ್ನುವುದು ಪಾಲಕರಿಗೆ ತಿಳಿದಿರಬೇಕು. ಮಕ್ಕಳು ತಪ್ಪು ಮಾಡುವುದು ಸಹಜ. ತಪ್ಪಿದಾಗ ತಲೆ ಮೇಲೆ ಕೈ ಸವರಿ ಅದೇ ಕೆಲಸವನ್ನು ಹೀಗೆ ಮಾಡಬಹುದಿತ್ತಲ್ಲ ಎಂಬ ಆತ್ಮಸಮಾಲೋಚನೆ ರೂಪದ ಸಲಹೆ ನೀಡವಂತಿರಬೇಕು. ಮಕ್ಕಳೊಂದಿಗೆ ಮನೆಯಂಗಳದಲ್ಲಿ ಆಟವಾಡುವ ಮತ್ತು

ಮಗು ಸುರಕ್ಷಿತ ವಾತಾವರಣದಲ್ಲಿ ಕಲಿಕೆಯನ್ನು ಮಾಡುವಂತಿದ್ದರೆ, ಮಕ್ಕಳು–ಶಿಕ್ಷಕ ಮತ್ತು ಪೋಷಕರ ನಡುವಿನ ಭಾವನಾತ್ಮಕ ಬಂಧವು ಗಟ್ಟಿಗೊಳಿಸುತ್ತದೆ. ಪೋಷಕರು ತಮ್ಮ ಮಗು ಮುಕ್ತವಾಗಿ ಮಾತನಾಡಲು, ಸಮಸ್ಯೆಗಳನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸುತ್ತಾ, ನೀವು ಅವರನ್ನು ಹೆದರಿಸುವುದನ್ನು ಮತ್ತು ಬೆದರಿಸುವುದನ್ನು ನಿಲ್ಲಿಸಬೇಕು. ಆಗ ಮಾತ್ರ ಮಕ್ಕಳು ನಮ್ಮ ಬಳಿಗೆ ಬಂದು ತಮ್ಮ ಬಾಲ್ಯದಲ್ಲಿ ತಲೆದೋರಿದ ಸಮಸ್ಯೆಗಳ ಬಗ್ಗೆ ಬಿಚ್ಚಿಡುತ್ತಾರೆ.

ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ನಿಗಾ ವಹಿಸಬೇಕು ಮಕ್ಕಳ ಮನೋಭಾವ ಅಥವಾ ಮನೋಧೋರಣೆಯನ್ನು ಮುಖ್ಯವಾಗಿ ಅವರ ಬಾವನೆ, ನಡುವಳಿಕೆ. ಆಲೋಚನೆ ಮತ್ತು ಸಂಬಂಧಗಳ ಮೇಲೆ ಅವಲಂಬಿಸಿರುತ್ತದೆ. ಮಕ್ಕಳ ಭಾವನೆ, ಖಿನ್ನತೆ, ಗಮನದ ಕೊರತೆ, ವರ್ತನೆಯ ಅಸ್ವಸ್ಥತೆಗಳು, ನಡುಳಿಕೆಯಲ್ಲಿ ಬದಲಾವಣೆ, ಒಂಟಿತನ, ಅಟೋಟಗಳಲ್ಲಿ ನಿರಾಸಕ್ತಿ, ನಿದ್ರಾಭಂಗ ಮತ್ತು ದೈಹಿಕ ಆರೋಗ್ಯದ ಮೇಲಾಗುತ್ತಿರುವ ಪರಿಣಾಮಗಳನ್ನು ಗುರುತಿಸಿ, ಅಗತ್ಯವೆನಿಸಿದರೆ, ವೈದ್ಯರು ಅಥ–'ವಾ ಆಪ್ತಸಮಾಲೋಚಕರ ಬಳಿ ಅವಶ್ಯಕ ಸಲಹೆ ಪಡೆಯಬೇಕು.

ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡಬೇಕು

ಇತ್ತೀಚೆಗೆ ನಡೆಯುತ್ತಿರುವ ಘಟನೆಗಳ ಬಗ್ಗೆ ಮಾನಸಿಕ ತಜ್ಞರ ಸಲಹೆಯಂತೆ, ಪೋಷಕರು ಮಕ್ಕಳನ್ನು ಕಿಂಚಿತ್ತೂ ನಿರ್ಲಕ್ಷಿಸಬಾರದು. ಮಕ್ಕಳು ಯಾವುದೇ



ವಿಷಯದ ಬಗ್ಗೆ ಹೇಳಲು ಬಂದಾಗ ತಾಳ್ಮೆಯಿಂದ ಆಲಿಸುವಂತಾಗಬೇಕು. ಅವರ ಮನದ ಭಾವನೆಗಳನ್ನು ಕೇಳಬೇಕು. ಮೊಬೈಲ್ ಫೋಬಿಯಾ ದೂರಾಗಿಸಲು ಪ್ರಯತ್ನಿಸದೇ ಸಾಧ್ಯವಾದ ಮಟ್ಟಿಗೆ ಮೊದಲು ನಾವು ಮಕ್ಕಳ ಮುಂದೆ ಮೊಬೈಲ್ ಬಳಸುವದನ್ನು ನಿಲ್ಲಿಸಬೇಕು. ಅಂದಾಗ ಮಾತ್ರ ಅವರು ನಮ್ಮನ್ನು ಅನುಕರಣೆ ಮಾಡುತ್ತಾರೆ ಹೊರತು ಹೇಳಿದ ಪಾಠದಿಂದಲ್ಲ ಎಂಬ ಸೂಕ್ಷ್ಮವನ್ನು ಅರಿಯಬೇಕು. ಸದಾ ಮಕ್ಕಳ ಜತೆಗೆ ನಾವಿದ್ದೇವೆ ಎಂಬ ದೃಢವಾದ ಭಾವನಾತ್ಮಕ ಬೆಂಬಲವನ್ನು ನೀಡಬೇಕು.

**ಕೊನೆಯ ನುಡಿ**

ಮಕ್ಕಳ ಮಾನಸಿಕ ಆರೋಗ್ಯ ಮತ್ತು ಡಿಜಿಟಲ್ ಬದುಕಿನ ಮಧ್ಯೆ ಅತೀ ನಾಜೂಕಾದ ಅಥವಾ ಸಂವೇದನಾಶೀಲತೆಯಿಂದ ಸಂಬಂಧದ ಬಗ್ಗೆ ಇಡೀ ಸಮಾಜ ಇಂದು ಗಂಭೀರವಾಗಿ ಯೋಚಿಸಬೇಕಾಗಿದೆ. ಮೋಬೈಲ್ ಎಂಬ ಮಾಯಾವಿ ಕಾರಣದಿಂದ ಪೋಷಕರು ಮತ್ತು ಮಕ್ಕಳ ಸಂಬಂಧಗಳಲ್ಲಿ ಕುಸಿತ ಕಾಣುತ್ತಿದೆ. ಮಕ್ಕಳು ಮನರಂಜನೆ, ರೀಲ್ಸ್, ಗೇಮ್ಸ್, ಸಾಮಾಜಿಕ ಮಾಧ್ಯಮಗಳ ಕಂಟೆಂಟಗಳನ್ನು ನೋಡುವುದು ಮತ್ತು ಅವುಗಳ ಮೇಲೆ ಅತಿಯಾದ ಆಸಕ್ತಿ ಹೊಂದಿರುವುದೇ ಇದಕ್ಕೆ ಕಾರಣ. ಆದ್ದರಿಂದ ಸ್ಮಾರ್ಟಫೋನ್ ಅತಿಯಾದ ಬಳಕೆ ಮತ್ತು ಅದು ಸೃಷ್ಟಿಸುವ ಕಾಲ್ಪನಿಕ ಜಗತ್ತಿನ ಪರಿಣಾಮಗಳ ಬಗ್ಗೆ ಮಕ್ಕಳಿಗೆ ಮನದಟ್ಟು ಮಾಡಿಕೊಟಬೇಕು. ಮನೆಯಲ್ಲಿ ಮಕ್ಕಳ ಕಥೆ, ಚಂದಮಾಮಾ ಮತ್ತು ಇನ್ನಿತರ ಮಕ್ಕಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಬೇಕು.

ಲೇಖನ
– ಮಲ್ಲಪ್ಪ. ಸಿ. ಖೊದ್ನಾಪೂರ
(ತಿಕೋಟಾ)
ವಿಜಯಪುರ



# ಮಗುವಿನೊಂದಿಗೆ ಬಾವಿಗೆ ಹಾರಿ ಮಹಿಳೆ ಆತ್ಮಹತ್ಯೆ

ಕಲಬುರಗಿ:ಕೌಟುಂಬಿಕ ಕಲಹದ ಹಿನ್ನೆಲೆ ಗರ್ಭಿಣಿ ಮಹಿಳೆಯೊಬ್ಬರು ತಮ್ಮ ಒಂದೂವರೆ ವರ್ಷದ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಆಳಂದ ತಾಲೂಕಿನ ಚಿಂಚನಸೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ಮೃತರನ್ನು ಅಂಬಿಕಾ ವೀರಭದ್ರಪ್ಪ (25) ಹಾಗೂ ಅವರ ಮಗುವನ್ನು ಆರಾಧ್ಯ ಎಂದು ಗುರುತಿಸಲಾಗಿದೆ. ಮೂಲಗಳ ಪ್ರಕಾರ, ಅಂಬಿಕಾ ಅವರು ಮೂರು ವರ್ಷಗಳ ಹಿಂದೆ ಚಿಂಚನಸೂರು ಗ್ರಾಮದ ವೀರಭದ್ರ ಅವರೊಂದಿಗೆ ವಿವಾಹವಾಗಿದ್ದರು. ಮದುವೆಯಾದ ನಂತರ ದಂಪತಿಗಳ ನಡುವೆ ಹೊಂದಾಣಿಕೆ ಕೊರತೆಯಿಂದಾಗಿ ಆಗಾಗ ಕೌಟುಂಬಿಕ ಕಲಹಗಳು ನಡೆಯುತ್ತಿದ್ದು, ಇದರಿಂದ ಅಂಬಿಕಾ ಮನನೊಂದಿದ್ದರು ಎನ್ನಲಾಗಿದೆ.

ಗುರುವಾರ ಬೆಳಗ್ಗೆ ಅಂಬಿಕಾ ಮನೆಯಿಂದ ಹೊರಟು ಗ್ರಾಮದ ಬಾವಿಯತ್ತ ತೆರಳಿದ್ದಾರೆ. ಬಾವಿ ಬಳಿ ತಮ್ಮ ಚಪ್ಪಲಿಗಳನ್ನು ಬಿಟ್ಟು, ಮಗುವನ್ನು ಬೆನ್ನಿಗೆ ಕಟ್ಟಿಕೊಂಡೇ ಬಾವಿಗೆ ಹಾರಿರುವುದು ಬೆಳಕಿಗೆ ಬಂದಿದೆ.

ಬೆಳಗ್ಗೆಯಿಂದ ಅಂಬಿಕಾ ಕಾಣಿಸದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹುಡುಕಾಟ ನಡೆಸಿದ್ದಾರೆ. ಈ ವೇಳೆ ಬಾವಿ ಸಮೀಪ ಚಪ್ಪಲಿಗಳು ಪತ್ತೆಯಾಗಿದ್ದು, ಅನುಮಾನಗೊಂಡ ಸ್ಥಳೀಯರು ಬಾವಿಯಲ್ಲಿ ಶೋಧ ನಡೆಸಿದಾಗ ತಾಯಿ ಮತ್ತು ಮಗುವಿನ ಮೃತದೇಹಗಳು ಪತ್ತೆಯಾಗಿವೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಲಬುರಗಿ: ನಗರದ ಬ್ರಹ್ಮಪುರ ಷಾ ಹುಸೇನಿ ಚಿಲ್ಲಾ ದರ್ಗಾದ ಹತ್ತಿರ ಮೊಹರಂ ಅಂಗವಾಗಿ ಇಂದು ಬೆಳಿಗ್ಗೆ ಆಲಂಗಳ ಮೆರವಣಿಗೆ ಜರುಗಿತು.ನೂರಾರು ಜನ ಭಾಗವಹಿಸಿದರು.



ಕಲಬುರಗಿ: ಅಂತರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಮಾದಕ ವಸ್ತು ಕಳ್ಳ ಸಾಗಾಣಿಕೆ ವಿರೋಧಿ ದಿನದ ಅಂಗವಾಗಿ ಕಲಬುರಗಿ ನಗರ ಪೊಲೀಸ್ ವತಿಯಿಂದ ಇಂದು ಬೆಳಿಗ್ಗೆ ನಗರದ ಜಗತ್ ವೃತ್ತದಿಂದ ಸರದಾರ ವಲ್ಲಭಭಾಯಿ ಪಟೇಲ್ ವೃತ್ತದವರೆಗೆ ಜಾಗೃತಿ ವಾಥಾನ್ ಹಮ್ಮಿಕೊಳ್ಳಲಾಯಿತು. ಪೊಲೀಸ್ ಕಮಿಷನರ್ ಡಾ ಶರಣಪ್ಪ ಎಸ್.ಡಿ,ಎಸ್ಪಿ ಅಡ್ಡೂರು ಶ್ರೀನಿವಾಸಲು, ಡಿಸಿಪಿ ಶಾಲೂ ಅವರು ಸೇರಿದಂತೆ ಪೊಲೀಸ್ ಅಧಿಕಾರಿಗಳು, ವೈದ್ಯರು,ವಿದ್ಯಾರ್ಥಿಗಳು ಭಾಗವಹಿಸಿದರು.

# ಜಾನಪದ ಮತ್ತು ಸಾಂಸ್ಕೃತಿಕ ಕಲರವ ಕಾರ್ಯಕ್ರಮಕ್ಕೆ ಚಾಲನೆ: ಸಂಗೀತವು ಭಾವನೆಗಳನ್ನು ಬೆಸೆಯುವ ಶಕ್ತಿಯುತ ಮಾಧ್ಯಮ ಎಂದು ಅಭಿಪ್ರಾಯ

ಕಲಬುರಗಿ:ಸಂಗೀತಕ್ಕೆ ಯಾವುದೇ ಭಾಷೆ, ಜಾತಿ ಮತ್ತು ಧರ್ಮದ ಎಲ್ಲೆಗಳಿಲ್ಲ. ಇದು ಜನರ ಭಾವನೆಗಳನ್ನು ಬೆಸೆಯುವ ಬಹು ದೊಡ್ಡ ಶಕ್ತಿಯುತ ಮಾಧ್ಯಮವಾಗಿದೆ. ಶಾಸ್ತ್ರೀಯ ಸಂಗೀತ ಅಥವಾ ಹಿತವಾದ ಜಾನಪದ ಗೀತೆಗಳನ್ನು ಆಲಿಸುವುದರಿಂದ ನಮ್ಮಲ್ಲಿನ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ ಮತ್ತು ಏಕಾಗ್ರತೆಯೂ ಹೆಚ್ಚಿಸುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಶ್ರೀದೇವಿ ಸಂಗೀತ ಸಾಹಿತ್ಯ ಸಾಂಸ್ಕೃತಿಕ ಛಾಯಾಚಿತ್ರ ಕಲಾ ಸಂಸ್ಥೆ ವತಿಯಿಂದ ನಗರದ ಕಲಾ ಮಂಡಳದಲ್ಲಿ ಗುರುವಾರ ಹಮ್ಮಿಕೊಂಡ ಜಾನಪದ ಮತ್ತು ಸಾಂಸ್ಕೃತಿಕ ಕಲರವ ಕಾರ್ಯಕ್ರಮ ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಲಾವಿದರ ಸೃಜನಶೀಲತೆಗೆ ನಿರಂತರವಾಗಿ ಪ್ರೊತ್ಸಾಹ ನೀಡಬೇಕಾಗಿದೆ. ಅನೇಕ ಕಲಾವಿದರು ಇಂದು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ಆದರೂ ಅವರು ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಹಿರಿಯ ಸಾಹಿತಿ ಡಾ. ಹನುಮಂತರಾವ ದೊಡ್ಡಮನಿ ಮಾತನಾಡಿ, ಜಾನಪದ ಸಾಹಿತ್ಯವು ಕೇವಲ ಜನಪದರ ಕಥೆಯಷ್ಟೇ ಅಲ್ಲ, ಅದು ಇಡೀ ಕನ್ನಡ ಭಾಷೆ ಮತ್ತು ಶಿಷ್ಟ ಸಾಹಿತ್ಯದ ತಾಯಿ ಬೇರು ಆಗಿದೆ? ಬಾಯಿಯಿಂದ ಬಾಯಿಗೆ ಹರಿದುಬಂದ ಈ ಮೌಖಿಕ ಪರಂಪರೆ,



ಕನ್ನಡ ಸಂಸ್ಕೃತಿಯ ಜೀವನಾಡಿಯಾಗಿದೆ ಎಂದು ಮಾರ್ಮಿಕವಾಗಿ ಹೇಳಿದರು.

ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಬಸವರಾಜ ತೋಟದ ಮಾತನಾಡಿ, ಕಲಾವಿದರಿಗೆ ಅವಕಾಶ ಕೊಡುವ ಮೂಲಕ ಅವರನ್ನು ಪ್ರೊತ್ಸಾಹಿಸುವ ಕಾರ್ಯ ಮಾಡಲಾಗುತ್ತಿದೆ. ಕಲೆ ಮತ್ತು ಕಲಾವಿದರನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ನಿರಂತರವಾಗಿ ಆಯೋಜಿಸಲಾಗುತ್ತಿದೆ ಎಂದರು.

ಹಿರಿಯ ಪತ್ರಕರ್ತ ದೇವೇಂದ್ರಪ್ಪ ಕಪನೂರ, ಹೋರಾಟಗಾರ ದತ್ತು ಭಾಸಗಿ, ಮಲ್ಲಿಕಾರ್ಜುನ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಶರಣಪ್ಪ ಶಿಂಪಿ ಅಧ್ಯಕ್ಷತೆ ವಹಿಸಿದ್ದರು. ಜಾನಪದ ಮತ್ತು ಸಾಂಸ್ಕೃತಿಕ ಕಲರವ ಕಾರ್ಯಕ್ರಮದಲ್ಲಿ ಸಾದರ ಪಡಿಸಿದ ಕಲಾವಿದರು. ವಿರಗಾಸಿ ಪುರವಂತಿಗೆ. ಶಿವಕುಮಾರ್ ಡಬರಾಬಾದ ತಂಡ. ಶಹನಾಯಿ ಚಂದ್ರಕಾಂತ ಡಿಗ್ಗಿ ತಂಡ. ಜಾನಪದ ಗಾಯನ ಬಸವರಾಜ ಶ್ರೀಂಗೇರಿ ತಂಡ. ಸುಗಮ ಸಂಗೀತ ಸಿದ್ಧಲಿಂಗ ಮಾವೂರ ತಂಡ. ತತ್ವ ಪದ ಗಾಯನ ಮಹಾಂತಪ್ಪ ಕಾಂಬಳೆ ತಂಡ. ಹಂತಿ ಪದ ಮಲ್ಲಪ್ಪ ಎಸ್ ದೊಡ್ಡಿ. ಜಾನಪದ ನೃತ್ಯ ಕು.ಸಾನ್ವಿ ಯನಗುಂಟಿ. ಭರತ ನಾಟ್ಯ ಕು. ಅಕ್ಷತಾ ನಂದೂರ. ವಾದ್ಯ ಸಜಕಾರ ತಬಲಾ ಸಾತ ಶ್ರೀ ಲಕ್ಷ್ಮಣ ಹೇರೂರ. ಹಾರ್ಮೋನಿಯಂ ಸಾತ ಶ್ರೀಧರ ಹೊಸಮನಿ ನೀಡಿದರು.

# ಅಮೃತವರ್ಷಿಣಿ ಯೋಜನೆ ಕಾಮಗಾರಿ ರಚನೆಗಳ ಹಸ್ತಾಂತರ

ಕಲಬುರಗಿ:ವಾಟರ್ ಎಡ್ ಸಂಸ್ಥೆಯ ವತಿಯಿಂದ ಕಲಬುರ್ಗಿ ಮತ್ತು ಆಳಂದ ತಾಲೂಕಿನ ಆಯ್ದ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಮೃತ ವರ್ಷಿಣಿ ಯೋಜನೆಯ “ಕಾಮಗಾರಿ ರಚನೆಗಳ ಹಸ್ತಾಂತರ ಕಾರ್ಯಕ್ರಮ” ಗುರುವಾರ ತಾಲೂಕ ಪಂಚಾಯತ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಎಂ.ಕಟ್ಟಿಮನಿ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆಳಂದ ತಾಲ್ಲೂಕ ಪಂಚಾಯತಿಯ ಪಂಚಾಯತ್ ರಾಜ್ ಇಲಾಖೆ ಸಹಾಯಕ ನಿರ್ದೇಶಕ ವಿಶ್ವನಾಥ ಅವರು ಮಾತನಾಡಿ, ವಾಟರ್ ಎಡ್ ಸಂಸ್ಥೆಯ ಅನೇಕ ಕಾಮಗಾರಿಗಳು ಹಾಗೂ ಜನರಲ್ಲಿ ನೀರಿನ ಮಹತ್ವ ಕುರಿತು ಅರಿವು ಕಾರ್ಯಕ್ರಮಗಳನ್ನು ಮಾಡಿರುತ್ತಾರೆ ಅವರು ಕೈ ಗೊಂಡ ಕಾಮಗಾರಿಗಳನ್ನು ಸಂರಕ್ಷಣೆಯನ್ನು ಮಾಡುವುದು ಮತ್ತು ಅಂತರ್ಜಲ ಮಟ್ಟ ಹೆಚ್ಚಿಸುವ ಕೆಲಸ ಆಗಬೇಕು ಎಂದರು.

ಅತಿಥಿಗಳಾಗಿ ಕಲಬುರಗಿ ತಾಲ್ಲೂಕ ಪಂಚಾಯತಿ ತಾಲೂಕ ಯೋಜನಾ ಅಧಿಕಾರಿ ಜಯಶ್ರೀ ಬಿ.ಕರ್ಜಗಿ, ವಾಟರ್ ಎಡ್ ಸಂಸ್ಥೆಯ ರಾಯಚೂರು ಜಿಲ್ಲಾ ಸಂಯೋಜಕರು ವಹಿಸಿ ಮಾತನಾಡಿ, ಸಂಸ್ಥೆಯು 2023ರಿಂದ 2026 ವರಿಗೆ ಮೂರು ವರ್ಷಗಳಿಂದ ನಿರಂತರವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಗ್ರಾಮಗಳಲ್ಲಿ ಅನೇಕ ಕಾಮಗಾರಿಗಳು (ರಚನೆಗಳು) ಮಾಡಿರುತ್ತೇವೆ ಹಾಗೂ ಜನರಲ್ಲಿ ನೀರಿನ ಮಹತ್ವ ಹಾಗೂ ಅಂತರ್ಜಲ ಮಟ್ಟ ಹೆಚ್ಚಿಸುವ ಬಗ್ಗೆ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಜಾಗೃತಿ ಅರಿವು ಮತ್ತು ಇನ್ನಿತರ ಚಟುವಟಿಕೆಗಳು ಸಭೆ ಕಾರ್ಯಕ್ರಮ ಮಾಡಿರುತ್ತೇವೆ. ಈಗ ನಮ್ಮ



ಯೋಜನೆಯ ಕೊನೆಯ ಹಂತ ವಾಗಿರುವುದರಿಂದ ಇಂದು ಈ ಕಾರ್ಯಕ್ರಮದ ಮೂಲಕ ಎಲ್ಲಾ ಕಾಮಗಾರಿ ರಚನೆಗಳನ್ನು ತಮ್ಮಗೆ ಹಸ್ತಾಂತರ ಮಾಡುತ್ತಿದ್ದೇವೆ. ಇವುಗಳ ಸಂರಕ್ಷಣೆ ಹಾಗೂ ಸಣ್ಣ ಪುಟ್ಟ ದುರಸ್ತಿಗಳನ್ನು ತಮ್ಮ ಗ್ರಾಮ ಪಂಚಾಯತ್ ಯಿಂದ ಮಾಡಿ ಮತ್ತು ಸಮುದಾಯದಲ್ಲಿ ಜನರಿಗೆ ಕೆರೆ, ಇಂಗು ಗುಂಡಿ, ಚೆಕ್ ಡ್ಯಾಂ, ಮಳೆ ನೀರು ಕೊಯ್ಲುಗಳಂತ ಅನೇಕ ಕಾಮಗಾರಿಗಳು ಮಾಡಿ ಹರಿದು ಹೋಗುವ ಮಳೆ ನೀರು ನಿಲ್ಲಿಸಿ ಭೂಮಿಗೆ ಇಂಗಿಸಿ ಅಂತರ್ಜಲ ಮಟ್ಟ ಹೆಚ್ಚಿಸುವ ಬಗ್ಗೆ ಮಾಹಿತಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದರು. ನಂತರ ಸಂಸ್ಥೆಯ ವತಿಯಿಂದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಸನ್ಮಾನ ಹಾಗೂ ನೀರಿನ ಪರಿಕ್ಷೆ ದಾಖಲೆ ಪುಸ್ತಕ ಹಾಗೂ ಕಾಮಗಾರಿಗಳು ಮಾಡಿದ ಪುಸ್ತಕ ಹಸ್ತಾಂತರ ಮಾಡಲಾಯಿತು.

ಕಲಬುರಗಿ ಮತ್ತು ಆಳಂದ ತಾಲೂಕಿನ ಎಲ್ಲಾ ಗ್ರಾಮ ಪಂಚಾಯತಗಳಿಗೆ ನೀರಿನ ಪರಿಕ್ಷೆ ದಾಖಲೆ ಪುಸ್ತಕ ನೀಡಲಾಯಿತು. ನಂತರ ಅಭಿವೃದ್ಧಿ ಅಧಿಕಾರಿಗಳು ಹಾಗೂ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಕಾರ್ಯದರ್ಶಿಗಳು, ತಾಂತ್ರಿಕ ಸಿಬ್ಬಂದಿಗಳು, ಪಂಪ್ ಆಪರೇಟಗಳು ಎಂ.ಬಿ.ಕೆ. ಸಿಬ್ಬಂದಿಗಳು ಈ ಕಾರ್ಯಕ್ರಮದ ಕೇಂದ್ರ ಬಿಂದುಗಳಾಗಿದರು. ಶಿವಕುಮಾರ ಕಾರ್ಯಕ್ರಮ ನಿರೂಪಿಸಿದರು. ಶಶಿಕಾಂತ ಸ್ವಾಗತಿಸಿದರು. ಭೀಮರಾವ ಭಾರತಿ ವಂದಿಸಿದರು. ಶಿವಲೀಲಾ ಅವರನ್ನು ಸನ್ಮಾನಿಸಲಾಯಿತು. ಶೋಭಾ,ಶಶಿಕಲಾ ಉಪಸ್ಥಿತರಿದ್ದರು.

# ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಡಾ.ಗುರಮ್ಮ ಸಿದ್ಧಾರೆಡ್ಡಿ ಆಯ್ಕೆ



ಭಾಲ್ಕಿ: ವಿಶ್ವಬಸವಧರ್ಮ ಟ್ರಸ್ಟ್ ಅನುಭವಮಂಟಪ ಬಸವಕಲ್ಯಾಣ ವತಿಯಿಂದ ಕೊಡಮಾಡುವ ಪ್ರಸಕ್ತ 2026ನೇ ಸಾಲಿನ ಡಾ. ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಬೀದರ್ ನಗರದ ಹಿರಿಯ ಸಮಾಜ ಸೇವಕಿ ಡಾ.ಗುರಮ್ಮ ಸಿದ್ಧಾರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರವನ್ನು ಜೂ.30 ರಂದು ಸಾಯಂಕಾಲ 5 ಗಂಟೆಗೆ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಪ್ರದಾನ ಮಾಡಲಿದ್ದಾರೆ ಎಂದು ವಿಶ್ವಬಸವಧರ್ಮ ಟ್ರಸ್ಟ್ ಅನುಭವಮಂಟಪದ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ. ಪ್ರಶಸ್ತಿ ಪುರಸ್ಕೃತರ ಪರಿಚಯ:ಡಾ. ಗುರಮ್ಮ ಸಿದ್ಧಾರೆಡ್ಡಿ ಅವರು ಬೀದರ ಜಿಲ್ಲೆಯಲ್ಲಿ ನಡೆಯುವ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ಜಿಲ್ಲಾ ಆಯುಕ್ತರಾಗಿ ಸುದೀರ್ಘ ಕಾಲದಿಂದ ಸೇವೆ ಸಲ್ಲಿಸುತ್ತಿದ್ದಾರೆ. ರಾಷ್ಟ್ರೀಯ ಏಕತೆ, ಸಾಂಸ್ಕೃತಿಕ ಚಟುವಟಿಕೆಗಳು, ಕುಟುಂಬ ಯೋಜನೆ, ಕೈಗಾರಿಕೆ, ನ್ಯಾಯಾಂಗ ಸೇವೆ, ಅಂಗವಿಕಲರ ಪುನರವಸತಿ ಮುಂತಾದ ಕ್ಷೇತ್ರಗಳಲ್ಲಿ ಇವರು ಸಲ್ಲಿಸುತ್ತಿರುವ ಸೇವೆ ಅಭಿನಂದನಾರ್ಹವಾಗಿದೆ.

ವಯಸ್ಕರ ಶಿಕ್ಷಣ ಹಾಗೂ ಆರೋಗ್ಯ ಮತ್ತು ಗ್ರಾಮೀಣ ಪ್ರದೇಶ ಅಭಿವೃದ್ಧಿಗಾಗಿ ವಿಶೇಷ ಕಾರ್ಯ ಮಾಡುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ನಿರಂತರ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಗುರು-ಲಿಂಗ-ಜಂಗಮ ಪ್ರೇಮಿಗಳಾದ ಇವರು ದಾಸೋಹಭಾವವುಳ್ಳವರಾಗಿದ್ದಾರೆ. ಇವರ ಸಮಗ್ರ ಸೇವೆಯನ್ನು ಗುರುತಿಸಿ, ಪ್ರಸಕ್ತ ಸಾಲಿನ ಡಾ. ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

# ಅತಿಯಾದ ಮೊಬೈಲ್ ಬಳಕೆಯಿಂದ ಅನೇಕ ಸಮಸ್ಯೆ

ಬೀದರ್:ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಿಂದ ಹಿರಿಯರ ವರೆಗೆ ಅನೇಕ ಸಮಸ್ಯೆಗಳು ಉಂಟಾಗುತ್ತಿವೆ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ದೇವಿಪ್ರಸಾದ್ ಕಲಾಲ್ ಹೇಳಿದರು.

ತಾಲ್ಲೂಕಿನ ಮಂದಕನಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆದ 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಣ್ಣಿನ ಸಮಸ್ಯೆ, ತಲೆ ನೋವು, ನಿದ್ರಾಹೀನತೆ, ನೆನಪಿನ ಶಕ್ತಿ ಕಡಿಮೆಯಾಗುವುದು, ಒಂಟಿತನ ಮುಂತಾದವು ಮೊಬೈಲ್‌ನ ದುಷ್ಪರಿಣಾಮಗಳಾಗಿವೆ ಎಂದು ತಿಳಿಸಿದರು.

ಮಕ್ಕಳು ಹಾಗೂ ಯುವಕರು ದಿನಕ್ಕೆ ಹಲವು ಗಂಟೆ ಮೊಬೈಲ್‌ನಲ್ಲಿ ಕಳೆಯುತ್ತಿದ್ದಾರೆ. ಓದು, ಕ್ರೀಡೆ ಹಾಗೂ ಕುಟುಂಬದ ಜತೆ ಸಮಯ ಕಳೆಯುವುದು ಕಡಿಮೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪುಸ್ತಕಗಳು ಜೀವನಕ್ಕೆ ದಾರಿದೀಪವಾಗಿವೆ. ಹೀಗಾಗಿ ಮೊಬೈಲ್ ಬಳಕೆ ಮಿತಿಗೊಳಿಸಿ, ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

# ಹೊಕ್ರಾಣಾ: ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ. ಬೆಲ್ದಾಳೆ ಚಾಲನೆ



ಬೀದರ್: ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ ವಿವಿಧ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ರಾಜಗೀರಾ ಗ್ರಾಮದಿಂದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸುಮಾರು ?10 ಕೋಟಿ ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಈ ರಸ್ತೆ ನಿರ್ಮಾಣದಿಂದ ಎರಡು ಗ್ರಾಮಗಳ ಜನರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿದೆ. ಹಲವು ವರ್ಷಗಳ ಬೇಡಿಕೆಯಾಗಿದ್ದ ಈ ರಸ್ತೆ ಪೂರ್ಣಗೊಂಡಿರುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಅನುಕೂಲ ಪಡೆಯುತ್ತಿದ್ದಾರೆ.

ಇದೀಗ ಹೊಕ್ರಾಣಾ (ಕೆ) ಗ್ರಾಮದಲ್ಲಿ ?35 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಬಸವೇಶ್ವರ ದೇವಸ್ಥಾನಕ್ಕೆ ?5 ಲಕ್ಷ ವೆಚ್ಚದ ಭವನ ನಿರ್ಮಾಣ ಕಾಮಗಾರಿ ಹಾಗೂ ಹೊಕ್ರಾಣಾ (ಬಿ) ಗ್ರಾಮದ ಭೀಮಾಶಂಕರ ದೇವಸ್ಥಾನದ ಬಳಿ ?5 ಲಕ್ಷ ವೆಚ್ಚದ ಭವನ ನಿರ್ಮಾಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ರಸ್ತೆ, ಚರಂಡಿ, ಸಮುದಾಯ ಭವನ ಸೇರಿದಂತೆ ಸಾರ್ವಜನಿಕ ಉಪಯೋಗದ ಕಾಮಗಾರಿಗಳು ಗ್ರಾಮಗಳ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿದ್ದು, ಜನರ ಜೀವನಮಟ್ಟವನ್ನು ಇನ್ನಷ್ಟು ಉತ್ತಮಗೊಳಿಸಲಿವೆ ಎಂದು ಹೇಳಿದರು.

ಈ ವೇಳೆ ಗ್ರಾಮಸ್ಥರು ಮಾತನಾಡಿ, "ರಾಜಗೀರಾದಿಂದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಹಲವು ವರ್ಷಗಳ ಕನಸಾಗಿತ್ತು. ಇಂದು ರಸ್ತೆ ನಿರ್ಮಾಣ ಪೂರ್ಣಗೊಂಡಿರುವುದರ ಜೊತೆಗೆ ಗ್ರಾಮದ ಒಳಾಂಗಣ ರಸ್ತೆ, ಚರಂಡಿ ಹಾಗೂ ದೇವಸ್ಥಾನ ಭವನ ನಿರ್ಮಾಣ ಕಾಮಗಾರಿಗಳೂ ಆರಂಭವಾಗಿರುವುದು ಸಂತಸದ ವಿಷಯ. ನಮ್ಮ ಗ್ರಾಮದ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿ ನಿರಂತರ ಅನುದಾನ ತಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಗ್ರಾಮಸ್ಥರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು," ಎಂದು ಸಂತಸ ವ್ಯಕ್ತಪಡಿಸಿದರು.

ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಶಾಸಕರು, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರ ಮುಖಂಡರಾದ ವೀರಶೆಟ್ಟಿ ಪಾಟೀಲ್, ಸುರೇಶ ಮಾಶೆಟ್ಟಿ, ಚಂದ್ರಯ್ಯ ಸ್ವಾಮಿ, ವಿಶ್ವನಾಥ ಬೆಮಳಗಿ, ಬಾಬುರಾವ ಮೇತ್ರಿ, ಚಂದ್ರಕಾಂತ ಕೊಹೀರ, ಮಲ್ಲಿಕಾರ್ಜುನ ಪಾಟೀಲ, ಶಿವಕುಮಾರ ಪಾಟೀಲ, ಗೋಪಾಲ ರೆಡ್ಡಿ, ಪರಮೇಶ ಪಾಟೀಲ, ಮಲ್ಲಿಕಾರ್ಜುನ ಕುಂಬಾರ, ಸಂಗಯ್ಯ ಸ್ವಾಮಿ, ತುಕಪ್ಪ ಮೇತ್ರಿ, ಸಂಜುಕುಮಾರ ಕುಂಬಾರ, ಜಗನಾಥ್ ಉಪಾರ, ಅಶೋಕ ಮೇತ್ರಿ, ಸುಧಾಕರ ವರ್ಮಾ, ಫಾಳೇಪ್ಪ ರಾಜಗೀರ, ಮಲ್ಲಿಕಾರ್ಜುನ ಮುಲಗಿ, ಬಸವರಾಜ ಪವಾರ್, ಶಿವಕಾಂತ ಶೇಖಾಪುರ, ಫಾಳೇಪ್ಪ ಬಾಲಬಡಿ, ಸನ್ನಿಯೋದಿನ್ ಮಂಗಲಗಿಕರ, ವಿಜಯಕುಮಾರ ಸ್ವಾಮಿ, ಅಮೃತಪ್ಪ, ಮನೋಹರ, ಚನ್ನಪ್ಪ ಮುಮಡಿ, ಚಂದ್ರಶೇಖರ, ಪ್ರಭು ಸುತಾರ, ವೀರಭದ್ರಪ್ಪ ಕೊಹೀರ, ನರಸಪ್ಪ ಚಿಂತಲಗೇರಾ, ಸಂಗಪ್ಪ ಫಾಳಗೊಂಡ ಸೇರಿದಂತೆ ಅನೇಕ ಗ್ರಾಮಸ್ಥರು ಉಪಸ್ಥಿತರಿದ್ದರು.

# ನಿನ್ನ ಜೊತೆ ನನ್ನ ಕಥೆ

■ ಉದಯರಶ್ಮಿ ದಿನಪತ್ರಿಕೆ




ಪ್ರೀತಿಯ ದೀಪ್ತಿ

ವಿವಾಹ ಮಹೋತ್ಸವದ ಭರ್ಜರಿ ಔತಣಕೂಟದಲ್ಲಿ ವೈಭವೀಕರಣ ಎಲ್ಲೆಡೆ ತುಂಬಿ ತುಳುಕುತ್ತಿತ್ತು. ಕಣಕಣದಲ್ಲೂ ನಳನಳಿಸುವ ಬೆಳದಿಂಗಳು ಕಿರಣಗಳಂತಿದ್ದ ನಿನ್ನ ಅಲ್ಲಿ ಕಂಡು ಅರೆಕ್ಷಣ ಪುಳಕಗೊಂಡೆ.



ಪಾರ್ಟಿಯ ದೀಪಗಳ ಬೆಳಕಿನಲ್ಲಿ ನೀನುಟ್ಟಗಿಳಿ ಹಸಿರಿನ ಒಡಲಿನ ರೇಷ್ಮೆ ಸೀರೆ ಮಿಂಚುತ್ತಿತ್ತು. ನಿನ್ನ ಸುಂದರ ಮೈಕಟ್ಟಿಗೆ ಮುದ್ದಾಗಿ ಒಪ್ಪಿತ್ತು. ಅಗಲವಾದ ಬೆನ್ನನ್ನು ಅಲಂಕರಿಸಿದ ಡೋರಿ ಹಚ್ಚಿದ ರವಿಕೆ ನೀಳವಾದ ಜಡೆ ನಿನ್ನಂದವನ್ನು ಮತ್ತಷ್ಟು ಹೆಚ್ಚಿಸಿತ್ತು. ಡೈಮಂಡ್ ಸರವು ನೀಳ ಕುತ್ತಿಗೆಯ ಅಂದಕ್ಕೆ ಹೊಸ ಮೆರಗನ್ನು ತಂದಿತ್ತು. ಕಿವಿಯಲ್ಲಿನ ಲೋಲಕಗಳು ನಿನ್ನ ಕೆನ್ನೆಯನ್ನು ಮುದ್ದಿಸುತ್ತ ಆಡುತ್ತಿದ್ದವು. ತಂಗಾಳಿಗೆ ಹಾರುತ್ತಿದ್ದ ಮುಂಗುರುಳು ಬಟ್ಟಲು ಕಂಗಳಿಗೆ ಹಚ್ಚಿದ ಕಾಡಿಗೆ ಕೆಂದುಟಿಗಳ ಮೇಲಿನ ಕಿರುನಗು ಕೋಟಿ ದೀಪಗಳನ್ನು ಒಮ್ಮೆಲೇ ಹಚ್ಚಿದಂತಿತ್ತು. ಪ್ರತಿ ಹೆಜ್ಜೆಯಲ್ಲಿ ಒಂದು ಗಾಂಭೀರ್ಯ ಮತ್ತು ಲಾಸ್ಯವಿತ್ತು. ಹೆಜ್ಜೆಗೆ ತಕ್ಕಂತೆ ಸಣ್ಣ ನಡುವಿನ ಬಳುಕು ನೋಡುವವರ ಗಮನವನ್ನು ಸೆಳೆಯುತ್ತಿತ್ತು. ಕಣ್ಣು ಕೋರೈಸುವ ಮೈಕಟ್ಟಿಗೆ ಮೈಮರೆತು ನಿಂತಿದ್ದ ನನ್ನನ್ನು ಪ್ರೇಮಲೋಕಕ್ಕೆ ಕರೆದೊಯ್ದಿತ್ತು. ಹಲೋ, ಹಾಯ್ ಎಂದು ಪರಿಚಯದವರೆಲ್ಲ ಮಾತನಾಡಿಸಿದಾಗ ದೇಶಾವರಿ ನಗೆಯಲ್ಲಿ ಉತ್ತರಿಸುತ್ತಿದ್ದೆ. ಕಣ್ಣು ಮಾತ್ರ ನಿನ್ನ ಮೇಲೆ ನೆಟ್ಟಿತ್ತು. ನಿನ್ನ ಆಗಮನ ನನಗೆ ಅಚ್ಚರಿಯ ಜೊತೆಗೆ ಅಪಾರ ಖುಷಿ ತಂದಿತ್ತು. ಅಂದು ರಾತ್ರಿಯೆಲ್ಲ ನಿನ್ನದೇ ಕನಸು ಕಾಣುತ್ತ ನಿದ್ದೆಗೆ ಸಂಪೂರ್ಣ ರಜೆ ನೀಡಿದ್ದೆ.

ಪ್ರೀತಿಯ ಹೆಸರಿನಲ್ಲಿ ಹಿಂದಿನ ಗೆಳತಿ ಮನಸ್ಸಿಗೆ ಸೂಜಿಯಿಂದ ಚುಚ್ಚಿ ನೋಯಸಿದ್ದಳು. ಆಕೆ ನನ್ನೊಲವಿನಲ್ಲಿ ಬಂಧಿಯಾಗಿರಲಿಲ್ಲ. ಒಲವೆಂದು ಹೆಸರಿಟ್ಟು ಉಸಿರುಗಟ್ಟಿಸಿದ್ದಳು. ಎದೆಯೊಳಗಿನ ತುಮುಲಗಳಿಗೆ ಸ್ಪಂದಿಸದೇ ಹೊರ ನಡೆದಿದ್ದಳು. ಆಕೆಯ ಸ್ನೇಹದಿಂದ ಒಳಗೊಳಗೇ ನೊಂದು ಬೆಂದು ಕುದ್ದು ಆವಿಯಾಗಿ ಇಂಗಿದ ಕಂಬನಿಯ ಗೆರೆಗಳು ನನ್ನ ಮುಖದಲ್ಲಿ ಎದ್ದು ಕಾಣುತ್ತಿದ್ದವು. ಸ್ವಾರ್ಥಿಯಿಂದ ನಿಸ್ವಾರ್ಥ ಪ್ರೀತಿಯ ನಿರೀಕ್ಷಿಸಿದ್ದೇ ದೊಡ್ಡ ತಪ್ಪಾಯಿತು. ಎಂದೋ ಹಾಡಿದ ಅನುರಾಗಕೆ ದಿನವೂ ಉಮ್ಮಳಿಸಿ ಬರುವ ದುಃಖ ತಡೆಯದೇ ರಾತ್ರಿಯೆಲ್ಲ ದಿಂಬು ಹಸಿಯಾಗುತ್ತಿತ್ತು. ಆಕೆ ಮನ ಕಲಕಿ ರಾಡಿ ಎಬ್ಬಿಸಿದ್ದೇ ಹೆಚ್ಚಾಗಿತ್ತು. ಹೀಗಾಗಿರುವಾಗ ಆಸೆಗಳ ಮೂಟೆಯನ್ನೆಲ್ಲ ಬಿಗಿ ಗಂಟು ಹಾಕಿ ಕಟ್ಟಿ ಒಗೆದಿದ್ದೆ. ಹಗಲು ಯಾವುದು ಇರುಳು ಯಾವುದು ಅರಿವಾಗದೇ ಸುಮ್ಮನೆ ಕೂರುತ್ತಿದ್ದೆ. ಏಕಾಂಗಿಯಾಗಿ ಕೊರಗಿದ್ದೆ. ಹಗಲು ಇರುಳುಗಳು ನರಕಸದೃಶವಾಗಿದ್ದವು. ಮನೆಯ ಮೂಲೆಗಳು ಬಾಗಿಲು ಕಿಟಕಿಗಳು ದಿನವೂ ನಾ ಸಾಯುವುದನು ಕಂಡು ಬಿಕ್ಕುತ್ತಿದ್ದವು.

ಬದುಕಿನ ಸೂಕ್ಷ್ಮಗಳನ್ನು ಗ್ರಹಿಸಲು ಹೆಣಗಾಡುತ್ತಿದ್ದೆ. ಜೀವನ ಸಂತೋಷದ ಶೋಧದಲ್ಲಿ ತೊಡಗಿದ್ದೆ ಆಗ ಕಣ್ಮುಂದೆ ಆಫೀಸಿನಲ್ಲಿ ಸಹೋದ್ಯೋಗಿಯಾಗಿ ಬಂದವಳೇ ನೀನು. ನಿನ್ನಲ್ಲಿ ಬುದ್ಧಿಮಟ್ಟ ಮತ್ತು ಪ್ರಬುದ್ಧತೆಯ ಆಳ ಬಹಳ. ನಿನ್ನ ಅಂದಕ್ಕೆ ಬೆರಗಾದೆ. ಎಷ್ಟೋ ತಿಂಗಳುಗಳ ಮೇಲೆ ನನ್ನ ಮುಖದಲ್ಲಿ ಕಿರುನಗು ಮೂಡಿತ್ತು.. 'ಇಂಥ ಅಂದ ಎಲ್ಲೂ ಕಂಡಿಲ್ಲ.' ಎಂದ ನನ್ನ ಗೆಳೆಯನಿಗೆ ಅಂದವಿದ್ದರೆ ಸಾಲದು ಅಂದವನ್ನು ಮೀರುವ ಉದಾರತೆ ಇರಬೇಕೆಂದು ನೀನಾಡಿದ ಮಾತು ಮನ ಸೆಳೆದಿತ್ತು. ತಮ್ಮ ಕಷ್ಟವನ್ನಷ್ಟೇ ಪುಂಖಾನುಪುಂಖವಾಗಿ ಊದುವ ಈ ಕಾಲದಲ್ಲಿ ಮತ್ತೊಬ್ಬರ ಅಳಲನ್ನು ಸಾವಧಾನದಿ ಕೇಳುವ ಕಿವಿಗಳು ತೀರಾ ವಿರಳ. ಅಂಥ ವಿರಳ ಕಿವಿಗಳಲ್ಲಿ ನಿನ್ನವು ಅಗ್ರಪಂಕ್ತಿಯಲ್ಲಿದ್ದವು. ನನ್ನ ನಾನೇ ಬಂಧೀಖಾನೆಯಲ್ಲಿ ಬಂಧಿಯಾಗಿಸಿಕೊಂಡು ನರಳುತ್ತಿದ್ದುದು ನಿನಗೆ ಹೇಗೋ ಗೊತ್ತಾಯಿತು. ಕಪ್ಪುಗಟ್ಟಿ ಮೋಡದಂತಾಗಿದ್ದ ನೋವಿಗೆ ಮಳೆ ಸುರಿಸಿ ಹಗುರವಾಗುವುದು ಹೇಗೆಂಬುದನ್ನು ಕಲಿಸಿಕೊಟ್ಟೆ. ಬೊಗಸೆ ತುಂಬ ಪ್ರೀತಿ ಹಿಡಿದು ನೀನೇ ಎದುರು ನಿಂತೆ. ಪ್ರೀತಿ ಎಂಬ ಎರಡುವರೆ ಅಕ್ಷರದ ಪದಕ್ಕೆ ಯಾವ ಗಾಯವನ್ನು ಮರೆಸುವ ಶಕ್ತಿಯಿದೆ.

ನಿನ್ನಣ್ಣನ ಮದುವೆಯ ಕರೆಯೋಲೆಯನ್ನು ನೀಡಲು ನನ್ನ ಕೋಣೆಗೆ ಆಗಮಿಸಿದ್ದನ್ನು ಎಂದೆಂದೂ ಮರೆಯಲಾರೆ. ಬೇರೆ ಕಡೆಗೆಲ್ಲ ಆಮಂತ್ರಣ ಹಂಚಿ ನನ್ನ ಬಳಿ ಬಂದಾಗ ಸಂಜೆಯಾಗಿತ್ತು. ನಿನಗೇನು ತಿನ್ನಲು ಕುಡಿಯಲು ಕೊಡಬೇಕು ಎನ್ನುವ ತವಕ ಒಂದೆಡೆಯಾದರೆ ನನ್ನೆದೆಯ ಬಡಿತದ ಸದ್ದು ಆ ನಿಶಬ್ದದಲ್ಲಿ ನಿನಗೆಲ್ಲಿ ಸ್ಪಷ್ಟವಾಗಿ ಕೇಳಿಸುತ್ತೋ ಎಂಬ ಗಾಬರಿ ಇನ್ನೊಂದೆಡೆ. ಆ ಕ್ಷಣದಲ್ಲಿ ಏನು ಮಾತನಾಡಬೇಕೆಂದು ತಿಳಿಯದೆ ಮೌನವಾಗಿದ್ದೆ. ಕುರ್ಚಿ ಇಲ್ಲದ ಬ್ಯಾಚಲರ್ ಕೋಣೆಯಲ್ಲಿ ಮಂಚದ ಮೇಲೆ ಕುಳ್ಳರಿಸಿದ್ದೆ. ನಾ ನಿಂತುಕೊಂಡೇ ಇದ್ದೆ.


ಒಮ್ಮಿಂದೊಮ್ಮಲೇ ಜೋರಾಗಿ ಬಿದ್ದ ಮಳೆಗೆ ಬೀಸಿದ ಬಿರುಗಾಳಿಗೆ ಕರೆಂಟ್ ಕೈ ಕೊಟ್ಟಿತು. ಮೊಬೈಲ್ ಹುಡುಕಿ ಬ್ಯಾಟರಿ ಆನ್ ಮಾಡಲು ಯೋಚಿಸಿದೆ. ಆ ಗಳಿಗೆಯಲ್ಲಿ ನನ್ನ ಕೈಗೆ ನಿನ್ನ ಕೈ ತಾಕಿತು. ಮಳೆಯ ತಂಪಿನಲ್ಲಿ ನಿನ್ನ ಕೈಗಳ ಬೆಚ್ಚಗಿನ ಸ್ಪರ್ಷ ಇಡೀ ಜಗತ್ತನ್ನೇ ಮರೆಸಿತ್ತು. ಮುಂದೆ ಹೆಜ್ಜೆ ಇಡಲು ಹೋದೆ. ನಿನ್ನ ಮುಂಗುರುಳು ನನ್ನ ಕೆನ್ನೆಯನ್ನು ಸವರತೊಡಗಿದವು. ಆ ಕ್ಷಣ ನನ್ನಲ್ಲಿಯ ಆತಂಕವನ್ನು ಮರೆಸಿತ್ತು. ಪ್ರೀತಿಯ ತೇಲುವಿಕೆಯನ್ನು ನೀಡಿತ್ತು. ಇಬ್ಬರ ಉಸಿರಾಟದ ವೇಗ ಹೆಚ್ಚಾಗುತ್ತಿತ್ತು. ಆ ಉಸಿರಿನ ಬಿಸಿಗೆ ಹೃದಯಗಳು ಹತ್ತಿರವಾದವು. ಧೋ ಎಂದು ಸುರಿವ ಮಳೆಗೆ ಗಾಳಿಯೊಂದಿಗೆ ಬೀಸುತ್ತಿದ್ದ ತಣ್ಣನೆಯ ನೀರಿನ ಹನಿಗಳು ಮೈಮೇಲೆ ಬಿದ್ದಾಗ ಇಬ್ಬರೂ ನಡುಗಿದೆವು. ಆ ಚಳಿಗೆ ಹೆದರಿ ಮೆಲ್ಲನೆ ನನ್ನೆದೆಯ ಆಸರೆಗೆ ಸರಿದಾಗ ಇಬ್ಬರ ನಡುವಿನ ಅಂತರ ಕರಗಿ ಹೋಯಿತು. ನನಗೇ ಅರಿವಿಲ್ಲದಂತೆ ಸೊಂಟದ ಸುತ್ತ ಸುತ್ತಿದ ಕೈಗಳು ಒದ್ದೆಯಾದ ನಡುವನ್ನು ಸವರಿದಾಗ ಇಬ್ಬರ ದೇಹದಲ್ಲೂ ಹೊಸ ಸಂಚಲನ ಮೂಡಿತ್ತು. ಮಳೆ ಹನಿಯ ಸಿಂಚನ ಚುಂಬನಕೆ ಮನ ತಾಳ ಹಾಕಿ ತಕದಿಮಿ ಹೇಳುತ್ತಿತ್ತು. ಇನ್ನೇನು ತುಟಿಗಳು ತೆರೆದುಕೊಳ್ಳಲು ತಯಾರಾಗುತ್ತಿದ್ದ ಸಮಯದಲ್ಲಿ ಹೋದ ಕರೆಂಟ್ ಮರಳಿ ಬಂತು. ಆ ಮಳೆ ಹನಿಗಳು ಇಬ್ಬರ ಪವಿತ್ರ ಪ್ರೇಮಕ್ಕೆ ಅಸ್ತು ಎಂದು ಹೇಳಿದ್ದವು. ಒಲವಿನ ಅಮಲು ಮತ್ತಷ್ಟು ಏರಿತ್ತು. ನಡೆದ ಘಟನೆಗೆ ನಾಚಿಕೊಳ್ಳುತ್ತ ತಡವರಿಸುತ್ತ ಸಾವರಿಸಿಕೊಂಡು ಅಣ್ಣನ ಮದುವೆಗೆ ಬರ್ತಿಯಾತಾನೆ? ಎಂದು ಹುಸಿಮನಸಿನ ಜೊತೆ ಜೋರಿನ ಪ್ರಶ್ನೆ ಒಂದೇ ಉಸಿರಿನಲ್ಲಿ ಕೇಳಿದ್ದೆ.

ಮನದ ನೋವಿಗೆ ಮುಲಾಮು ಸವರಿದೆ. ಸನಿಹ ಬಂದು ಬಿಗಿದಪ್ಪಿಕೊಂಡು ಸಾಂತ್ವನ ಹೇಳಿದೆ. ಮುರಿದ ಮನಸ್ಸನ್ನು ಮರು ಜೋಡಿಸುವಲ್ಲಿ ಯಶಸ್ವಿಯಾದೆ. ನನ್ನ ದೋಷಗಳ ಬಗ್ಗೆ ಹೇಳಿದ್ದಲ್ಲದೇ ಅದಕ್ಕೆ ಪರಿಹಾರವನ್ನು ಸೂಚಿಸಿದ ಬಗೆಗೆ ಬೆರಗಾದೆ. ಮಡುಗಟ್ಟಿದ ಹೃದಯ ತಂತಿ ಮೀಟುವಲ್ಲಿ ಗೆದ್ದೆ. ಒಣಗಿದ ಬಾಳಬಳ್ಳಿ ಚಿಗುರಿಸಿದೆ ಚೈತ್ರಗೀತೆ ಹಾಡಿಸಿದೆ. ಮನವಿಂದು ಸರಿಗಮಪದ ಸವಿಜೇನಿಂದ ಸನಿದಪ ಹಾಡುತಿದೆ. ನಿನ್ನ ಮಧುರ ನೆನಪು ಕಾಡುತಿದೆ. ಭಾವನೆಗಳಿಗೆ ಬಣ್ಣ ಹಚ್ಚಿ ಕಣ್ಣಲ್ಲಿ ಮಾತನಾಡಿದ ನೆನಪಿನ ದೋಣಿಯ ಆ ಹಾಡು ಕಾಡುತಿದೆ. ನಿನ್ನ ಕಾಲ್ಗೆಜ್ಜೆ ಸದ್ದು ಕೇಳಲು ಹೃದಯ ಕುಣಿಯುತಿದೆ. ನೀನಿರದಿದ್ದರೆ ಈ ಬದುಕು ಅಂದೇ ಅಂತ್ಯ ಹಾಡುತ್ತಿತ್ತು. ಆದರೆ ನೀನು ಛಲ ಬಿಡದೇ ಬದುಕಿಗೆ ಮತ್ತೆ ಚಿಗುರುವ ಉತ್ಸಾಹ ತಂದೆ. ಕತ್ತರಿಸಿ ಹೋಗಿದ್ದ ಕರುಳ ಬಳ್ಳಿ ಮಗ ಬರುತ್ತಾನೆಂದು ಕಾಯುತ್ತಿದ್ದ ಹೆತ್ತವರಿಗೆ ಹರುಷ ತಂದೆ ಮತ್ತೆ ಬೆಸುಗೆ ಬೆಸೆದೆ.





ತಾವರೆ ಹೂವಿನಂತೆ ಹುಣ್ಣಿಮೆಯ ಶಶಿಯಂತೆ. ಜೇನಿನ ಸವಿಯಂತೆ ಹೂಬನದಿ ಸುಗಂಧದಂತೆ ನನ್ನೊಳಗೊಳಗೆ ಒಲವ ಲಹರಿಯಾಗಿ ಒಡಮೂಡಿದೆ. ಒಂಟಿಕಾಲಲ್ಲಿ ನಿಂತು ತಪಸ್ಸು ಮಾಡುತ್ತಿದ್ದೇನೆ. ಚೆಲುವೆ ನಿನ್ನೊಲವು ಬೇಕೆಂದು ಬಳಿಗೆ ಬಂದಿರುವೆ. ನಿನ್ನ ಜೊತೆ ನನ್ನ ಕಥೆ ಮುಂದುವರೆಸುವೆ. ಹೃದಯ ತೆರೆದಿದೆ ಬಾ ಸೇರಿಕೊ. ಅರ್ಧಕ್ಕೆ ನಿಂತ ಮುತ್ತಿನಾಟವನು ಜೀವನಪೂರ್ತಿ ಮುಂದುವರೆಸೋಣ. ಇಂತಿ ನಿನ್ನ ದೀಪಕ



ಲೇಖನ
– ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142





# ಭಾವೈಕ್ಯತೆ ಸಾರುವ ತಮದಡ್ಡಿ ಮೊಹರಂ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ತಾಳಿಕೋಟಿ ತಾಲ್ಲೂಕಿನ ತಮದಡ್ಡಿ ಗ್ರಾಮದಲ್ಲಿ ಮೊಹರಂ ಐದು ದಿನಗಳಿಂದ ಊರಲ್ಲಿ ಸಂಭ್ರಮದ ವಾತಾವರಣ ಮತ್ತು ಶಾಂತಿಯುತವಾಗಿ ಮೊಹರಂ ಆಚರಿಸಲಾಯಿತು. ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಬಹುತ್ವ ಪ್ರಜ್ಞೆ ಈ ಪ್ರಜ್ಞೆಯು ಪುರಾಣ ಮತ್ತು ಇತಿಹಾಸವನ್ನ ಬೆರೆಸುತ್ತದ ಬೇರೆ ಬೇರೆ ಮತ ಧರ್ಮದ ಕಥ-'ನಗಳಲ್ಲಿರುವ ಸಮಾನ ಅಂಶಗಳನ್ನು ಒಂದೆಡೆ ಜೋಡಿಸುತ್ತದೆ ಇದು ಭಾರತದ ಸಾಂಸ್ಕೃತಿಕ ಪ್ರತಿಭೆ ಧರ್ಮ ಜಾತಿಗಳನ್ನ ಮೀರಿ ಸೃಷ್ಟಿಸಿಕೊಂಡಿರುವ ಅಸ್ಮಿತೆಯಾಗಿ ಮೊಹರಂ ರೂಪುಗೊಂಡಿದೆ. ಧರ್ಮ ಧರ್ಮಗಳ ಸಂಘರ್ಷದ ಮಧ್ಯೆ ಪರಸ್ಪರ ಸಂವಾದ ಮಾಡುವ, ಬಾಗಿಲು, ಕಿಟಕಿಗಳನ್ನು

ಮುಚ್ಚಿಕೊಳ್ಳುತ್ತಿವೆ ಇಂತಹ ಸನ್ನಿವೇಶದಲ್ಲಿ ಧರ್ಮಗಳ ನಡುವೆ ಸಂಸ್ಕೃತಿಗಳ ನಡುವೆ ಸಂವಾದ ಸಾಧ್ಯವಿದೆ ಎಂದು ಮೊಹರಂ ತೋರಿಸಿಕೊಡುತ್ತದೆ.

ಕತಲ್ ರಾತ್ರಿ ಎಂದು ಅಗ್ಗಿ ಅತ್ಯಂತ ವಿಶೇಷವಾಗಿ ನೋಡುಗರ ಕಣ್ಮನ ಸೆಳೆಯಿತು.

ಈ ಭಾವೈಕ್ಯತೆ ಹಾಗೂ ಧರ್ಮ ಧರ್ಮಗಳ ಸಂವಾದಕ್ಕೆ ತಮದಡ್ಡಿ ಮೂಹರಂ ಸಹ ಒಂದು ನಿದರ್ಶನ ಎಂದು ಹೇಳಬಹುದು.

# ಬಿ.ಎಲ್.ಡಿ.ಇ ಫಾರ್ಮಸಿ ಕಾಲೇಜ್ ಸಂಶೋಧಕರಿಗೆ ಕೇಂದ್ರ ಸರ್ಕಾರದ ಪೇಟೆಂಟ್

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಈ ವಿಶ್ವವಿದ್ಯಾಲಯ, ಪುಣೆಯ ಭಾರತಿ ವಿದ್ಯಾಪೀಠ ವಿಶ್ವವಿದ್ಯಾಲಯದ ಪೂನಾ ಫಾರ್ಮಸಿ ಕಾಲೇಜು ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಫಾರ್ಮಸಿ ಕಾಲೇಜಿನ ಸಂಶೋಧಕ ಡಾ. ರವೀಂದ್ರ ಜಿ. ಕುಲಕರ್ಣಿ, ಡಾ. ರಾಘವೇಂದ್ರ ವಿ. ಕುಲಕರ್ಣಿ, ಡಾ. ಆತ್ಮಾರಾಮ ಪವಾರ ಹಾಗೂ ಡಾ. ಅರವಿಂದಗೌಡ ಪಾಟೀಲ ಅವರ ತಂಡ ನಡೆಸಿದ "ಸಿಂಥೆಸಿಸ್ ಅಂಡ್ ಸೈಟೋಟಾಕ್ಸಿಕ್ ಆಕ್ಟಿವಿಟಿ ಆಪ್ ಇಂಡೋಲ್ ಡೇ-ರಿವೆಟಿವ್ಸ್ ಬಿಯರಿಂಗ್ ಟ್ರಯಾಜೋಲ್ ಸ್ಕ್ಯಾಫೋಲ್ಡ್" ಎಂಬ ಸಂಶೋಧನೆಗೆ ಕೇಂದ್ರ ಸರಕಾರದ ಪೇಟೆಂಟ್ ದೊರೆತಿದೆ.

ಕ್ಯಾನ್ಸರ್ ಚಿಕಿತ್ಸೆಗೆ ಹೊಸ ಔಷಧವನ್ನು(Drug Molecule) ಕಂಡುಹಿಡಿಯುವ ಉದ್ದೇಶದಿಂದ ಕೈಗೊಳ್ಳಲಾದ ಜಂಟಿ ಸಂಶೋಧನೆಗೆ ಈ ಪೇಟೆಂಟ್ ಲಭಿಸಿದೆ.

ಈ ಸಂಶೋಧನೆಯು ಔಷಧೀಯ ಕ್ಷೇತ್ರದಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಹೊಸ ಚಿಕಿತ್ಸೆ ವಿಧಾನಗಳನ್ನು ಅಭಿವೃದ್ಧಿ ಪಡಿಸುವ ಪ್ರಯತ್ನವಾಗಿದ್ದು, ಆರೋಗ್ಯ ಕ್ಷೇತ್ರದ ಪ್ರಮುಖ ಸವಾಲುಗಳನ್ನು ಎದುರಿಸಲು ಎರಡೂ ವಿಶ್ವವಿದ್ಯಾಲಯಗಳು ಹೊಸ ಔಷಧಗಳ ಅನ್ವೇಷಣೆಗೆ ಮಹತ್ವದ ಕೊಡುಗೆ ನೀಡಲಿವೆ.

ವಿಜ್ಞಾನಿಗಳ ಈ ಸಂಶೋಧನೆ ಪೇಟೆಂಟ್ ಲಭಿಸಿರುವುದಕ್ಕೆ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ, ಡೀಮ್ಡ್ ವಿವಿ ಕುಲಾಧಿಪತಿ ಬಿ. ಎಂ. ಪಾಟೀಲ, ಸಮಕುಲಾಧಿಪತಿ ಪ್ರೊ. ವೈ. ಎಂ. ಜಯರಾಜ, ಕುಲಪತಿ ಡಾ. ಅರುಣ ಚಂ. ಇನಾಮದಾರ ಸಂತಸ ವ್ಯಕ್ತಪಡಿಸಿದ್ದು, ಸಂಶೋಧಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ


■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕನ್ನಡ ಸಾಹಿತ್ಯ ಗೆಳೆಯರ ಬಳಗ ವತಿಯಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ.85 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಫೋಟೋದೊಂದಿಗೆ ಅಗತ್ಯ ದಾಖಲೆಗಳೊಂದಿಗೆ ಸಿಂದಗಿಯ ಅಂಬೇಡ್ಕರ್ ಭವನದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸಾರ್ವಜನಿಕ ಗ್ರಂಥಾಲಯ, ಅಥವಾ ಜ್ಯೋತಿ ನಗರದಲ್ಲಿರುವ ಲಿಟಲ್ ವಿಂಗ್ಸ್ ಪ್ರಿ ಸ್ಕೂಲ್‌ಯನ್ನು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಜುಲೈ 5 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ: 8277186757ಗೆ ಸಂಪರ್ಕಿಸಬಹುದು ಎಂದು ಕನ್ನಡ ಸಾಹಿತ್ಯ ಗೆಳೆಯರ ಬಳಗದ ಅಧ್ಯಕ್ಷ ರಾಜಶೇಖರ ಕೂಚಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಸಿಯೂಟ ದರ ಮರುನಿಗದಿಗೆ ಆಗ್ರಹಿಸಿ ಶಿಕ್ಷಕರ ಸಂಘ ಮನವಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಕ್ಷರ ದಾಸೋಹ ಯೋಜನೆಯಡಿ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿ ಊಟಕ್ಕೆ ಮಕ್ಕಳಿಗೆ ಎಣ್ಣೆ, ತೊಗ-ರಿಬೇಳೆ ವಿತರಿಸಬೇಕು. ಮೊಟ್ಟೆಗಳ ಖರೀದಿ ಮೊತ್ತ ಹೆಚ್ಚಳವಾಗಿದ್ದು, ದರ ಮರುನಿಗದಿಪಡಿಸಬೇಕೆಂದು ಆಗ್ರಹಿಸಿ ಜಿಲ್ಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಜಿಲ್ಲಾ ಪಂಚಾಯತಿ ಸಿಇಓ ರಿಷಿ ಆನಂದ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರ್ಜುನ ಲಮಾಣಿ, ಶೈಕ್ಷಣಿಕ ವರ್ಷ ಆರಂಭವಾಗಿ ಜೂನ ತಿಂಗಳು ಮುಗಿಯುತ್ತಾ ಬಂದರೂ ಶಾಲೆಗಳಿಗೆ ಬೇಳೆ ಹಾಗೂ ಎಣ್ಣೆ ಪೂರೈಕೆಯಾಗಿಲ್ಲ. ಮುಖ್ಯಗುರುಗಳು ಬೇಳೆ ಹಾಗೂ ಎಣ್ಣೆ ಸಹ ಅಂಗಡಿ ಮೂಲಕ ಖರೀದಿಸುತ್ತಾ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಕೇಜಿ ಎಣ್ಣೆಗೆ 180ರೂ. ಕೇಜಿ ಬೇಳೆಗೆ 120ರೂ. ರಂತೆ ಮುಖ್ಯಗುರುಗಳು ಖರೀದಿಸುತ್ತಿದ್ದಾರೆ.

ಇನ್ನು ಪ್ರಸ್ತುತ ಒಂದು ಮೊಟ್ಟೆಯ ಬೆಲೆ 8ರೂ ಇದೆ. ಸರ್ಕಾರ ಪ್ರತಿ ಮೊಟ್ಟೆಗೆ 6ರೂ. ಮಾತ್ರ ಅನುದಾನ ಮಾತ್ರ ನೀಡುತ್ತಿದೆ. ಇದರಿಂದ ಪ್ರತಿ ಮೊಟ್ಟೆಗೆ ಸುಮಾರು 2ರೂ. ಹೆಚ್ಚುವರಿ ವೆಚ್ಚವಾಗುತ್ತಿದ್ದು, ಈ ಹೆಚ್ಚುವರಿ ಮೊತ್ತವನ್ನು ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಸ್ವಂತ ಜೇಬಿನಿಂದ ಭರಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಇಂತಹ ಪರಿಸ್ಥಿತಿಯಿಂದ ಮಧ್ಯಾಹ್ನ ಬಿಸಿ ಊಟ ಯೋಜನೆಯ ಸಮರ್ಪಕ ನಿರ್ವಹಣೆ ಕಷ್ಟವಾಗುತ್ತಿದೆ. ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಅನುದಾನವನ್ನು ತಕ್ಷಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿ ಹಣಮಂತ ಕೊಣದಿ, ನಗರವಲಯ ಶಿಕ್ಷಕರ ಸಂಘದ ಅಧ್ಯಕ್ಷ ಜುಬೇರ ಕೆರೂರ ಇದ್ದರು.

# ಜನರ ಆರ್ಥಿಕ ಸಬಲೀಕರಣಲ್ಲಿ ಸಹಕಾರ ಬ್ಯಾಂಕುಗಳ ಪಾತ್ರ ಅನನ್ಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಪ್ರತಿಷ್ಠಿತ ಮಹಾಲಕ್ಷ್ಮಿ ಸಹಕಾರಿ ಬ್ಯಾಂಕ್ ಸಭಾಂಗಣದಲ್ಲಿ ಅಭಿಯಂತರರ ವಿಶೇಷ ಸಭೆ ನಡೆಸಲಾಯಿತು. ಕಟ್ಟಡ ನಿರ್ಮಾಣ ಸೇರಿದಂತೆ ಬ್ಯಾಂಕಿನ ವತಿಯಿಂದ ಕಲ್ಪಿಸಲಾಗುವ ವಿವಿಧ ಆರ್ಥಿಕ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಯಿತು.

ಸಹಕಾರದಿಂದ ಸಮರ್ಥನ ಎಂಬ ಧ್ಯೇಯದೊಂದಿಗೆ ಆಯೋಜಿಸಲಾಗಿದ್ದ ಈ ವಿಶೇಷ ಸಮಾಲೋಚನಾ ಸಭೆಯಲ್ಲಿ ಬ್ಯಾಂಕಿನ ವಿವಿಧ ಸೌಕರ್ಯ ಹಾಗೂ ಸೌಲಭ್ಯಗಳ ಬಗ್ಗೆ ಸಭೆಯಲ್ಲಿ ವಿಸ್ತಾರವಾಗಿ ತಿಳಿಸಲಾಯಿತು.

ಈ ವೇಳೆ ಬ್ಯಾಂಕಿನ ಅಧ್ಯಕ್ಷ ಮುಕುಂದ ಕುಲಕರ್ಣಿ ಮಾತನಾಡಿ, ಸಹಕಾರ ಬ್ಯಾಂಕುಗಳು ಜನರ ಆರ್ಥಿಕ ಸಬಲೀಕರಣಲ್ಲಿ ಅನುಪಮ ಪಾತ್ರ ವಹಿಸುತ್ತಿವೆ, ಕಟ್ಟಡ ನಿರ್ಮಾಣ ಸೇರಿದಂತೆ ಅನೇಕ ಉದ್ದೇಶಗಳಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಕಟ್ಟಡ ನಿರ್ಮಾಣ ಕ್ಷೇತ್ರಕ್ಕೂ ಕೊಡಗೆ ನೀಡಿದೆ, ಸಮಾಜದಲ್ಲಿ ಅಭಿಯಂತರರ ಪಾತ್ರ ಪ್ರಮುಖವಾಗಿದೆ, ಎಲ್ಲ ಕಟ್ಟಡಗಳ ಹಿಂದೆ ಅಭಿಯಂತರರ ಶ್ರಮ ಅಡಗಿದೆ ಎಂದರು.

ಅಭಿಯಂತರರ ಸಂಘದ ಅಧ್ಯಕ್ಷ ಅರುಣ ಮಠ ಮಾತನಾಡಿ, ಸಹಕಾರ ಬ್ಯಾಂಕುಗಳು ಆರ್ಥಿಕ ಪ್ರಗತಿಗೆ ನೀಡುತ್ತಿರುವ ಕೊಡುಗೆ ಅನನ್ಯ, ಸಹಕಾರ ಚಳವಳಿ ಒಂದು ಬಹುಮುಖ್ಯ ಅಂಗ, ಉತ್ತಮ ಮನೆ ನಿರ್ಮಾಣ ಪ್ರತಿಯೊಬ್ಬರ ಕನಸು, ಈ ಕನಸು ಈಡೇರಿಸುವ ನಿಟ್ಟಿನಲ್ಲಿ ಅಭಿಯಂತರರು ಶ್ರಮಿಸುತ್ತಾರೆ, ಪ್ರತಿಯೊಬ್ಬರ ಕನಸಿನ ಮನೆಗೆ ಸಾಕಾರ ರೂಪ ನೀಡುವವರು ಅಭಿಯಂತರರು, ಈ ನಿಟ್ಟಿನಲ್ಲಿ ಸಹಕಾರ ಬ್ಯಾಂಕು ಮುಂದೆ ಬಂದು ವಿವಿಧ ಸೌಲಭ್ಯ ಒದಗಿಸಲು ಮುಂದಾಗಿರುವುದು ಸಂತೋಷ ತಂದಿದೆ ಎಂದರು.

ಗಂಗಾಧರ, ಅಶ್ರಫ್ ಕುಡಚಿ, ಮಹೇಶ ರಾಂಪೂರ, ಮಹಾಲಕ್ಷ್ಮೀ ಬ್ಯಾಂಕ್ ಉಪಾಧ್ಯಕ್ಷ ವಿಕಾಸ್ ಪದಕಿ, ನಿರ್ದೇಶಕರಾದ ವಿಜಯ ಜೋಶಿ, ಕೃಷ್ಣಾ ಗುನ್ನಾಳಕರ, ಶಂಕರ್‌ರಾವ್ ಕುಲಕರ್ಣಿ, ಪವನ್ ಕುಲಕರ್ಣಿ, ಬಸವರಾಜ್ ಪತ್ತಾರ, ರಾಧಾ ತಾವರಗೇರಿ, ಬ್ಯಾಂಕಿನ ಪ್ರಬಂಧಕಿ ಪದ್ಮಾವತಿ ಕುಲಕರ್ಣಿ ಬ್ಯಾಂಕಿನ ಆರ್ಥಿಕ ಸೌಲಭ್ಯ ಹಾಗೂ ಸೇವೆಗಳ ಕುರಿತು ವಿವರಣೆ ನೀಡಿದರು. ಬ್ಯಾಂಕಿನ ನಿರ್ದೇಶಕಿ ಹಾಗೂ ಅಭಿಯಂತರರ ಸಂಘದ ನಿರ್ದೇಶಕಿಂ-ಯೂ ಆಗಿರುವ ವೀಣಾ ಟಂಕಸಾಲಿ ವಂದಿಸಿದರು.

ಈ ಸಂದರ್ಭದಲ್ಲಿ ಅಭಿಯಂತರರ ಸಂಘದ ಪದಾಧಿಕಾರಿಗಳು ಬ್ಯಾಂಕಿನ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ ಆಡಳಿತ ಆದರ್ಶವಾಗಬೇಕು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಾಡಪ್ರಭು ಕೆಂಪೇಗೌಡರು ಕೇವಲ ಒಬ್ಬ ಆಡಳಿತಗಾರರಲ್ಲ, ದೂರದೃಷ್ಟಿಯ ಚಿಂತಕರು, ಜನಪರ ನಾಯಕರು ಹಾಗೂ ಸುಸಂಘಟಿತ ಬೆಂಗಳೂರು ಮಹಾನಗರ ನಿರ್ಮಾಣದ ಹರಿಕಾರರು ಎಂದು ವಿಜಯಪುರ ತಹಶೀಲ್ದಾರರಾದ ಪ್ರಶಾಂತ ಚನ್ನಗೊಂಡ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರ ಅವರ ಆಡಳಿತದಲ್ಲಿ ಜನಕಲ್ಯಾಣ-ಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಬೆಂಗಳೂರು ನಗರ ನಿರ್ಮಾಣ ಮತ್ತು ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಆಡಳಿತ ತತ್ವಗಳು ಹಾಗೂ ಅಭಿವೃದ್ಧಿ ದೃಷ್ಟಿಕೋನ ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಕೆಂಪೇಗೌಡರು ಸಮಾಜದ ಎಲ್ಲ ವರ್ಗದ ಜನರನ್ನು ಸಮಾನವಾಗಿ ಕಾಣುವ ಮೂಲಕ ಉತ್ತಮ ಆಡಳಿತ ನಡೆಸಿದ್ದರು. ಅವರ ಆದರ್ಶಗಳು, ಮೌಲ್ಯಗಳು ಮತ್ತು ಸೇವಾ ಮನೋಭಾವವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ. ವಿಶೇಷವಾಗಿ ಯುವಜನತೆ ಅವರ ವ್ಯಕ್ತಿತ್ವ, ನಾಯಕತ್ವ ಹಾಗೂ ರಾಷ್ಟ್ರ ನಿರ್ಮಾಣದ ಚಿಂತನೆಗಳಿಂದ ಸ್ಫೂರ್ತಿ ಪಡೆಯಬೇಕು ಎಂದು ಹೇಳಿದರು.

ಉಪನ್ಯಾಸ ನೀಡಿದ ಯುವಜನ ಸೇವೆ ಮತ್ತು ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜಶೇಖರ ದೈವಾಡಿ, ನಾಡಪ್ರಭು ಕೆಂಪೇಗೌಡರ ಜೀವನ ಚರಿತ್ರೆ, ಆಡಳಿತ ವೈಖರಿ, ಐತಿಹಾಸಿಕ ಸಾಧನೆಗಳು ಹಾಗೂ ಬೆಂಗಳೂರು ನಗರದ ನಿರ್ಮಾಣದಲ್ಲಿ ಅವರ ದೂರದೃಷ್ಟಿಯ ಬಗ್ಗೆ ವಿವರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಕರಾದ ಕೆ.ಎ.ಉಪ್ಪಾರ, ಕೆ.ಎಮ್.ಎಫ್ ಅಧಿಕಾರಿ ಅರವಿಂದ ಎಸ್. ಕನ್ನೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ, ವಿದ್ಯಾವತಿ ಅಂಕಲಗಿ, ಸೋಮನಗೌಡ ಕಲ್ಲೂರ, ಭೀಮರಾಯ ಜಿಗಜಿಣಗಿ, ಬಸವರಾಜ ಶಿವಶರಣ, ಸಂಕೇತಗೌಡ ಕೌವಲಗಿ, ರವಿಗೌಡ, ಶರಣಗೌಡ, ಸಿದ್ದುಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಮತ್ತು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದರು.

# ಅಭಾವಿ ಮಹಾಸಭಾ ಅಧ್ಯಕ್ಷರಾಗಿ ಮಲ್ಲಯ್ಯ ಸಾಲಿಮಠ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ನಿಡಗುಂದಿ: ಹಿರಿಯ ಜೀವ ಮಲ್ಲಯ್ಯ ಸಾಲಿಮಠ ಅಖಿಲ ಭಾರತ ವೀರಶೈವ ಮಹಾಸಭಾ ನಿಡಗುಂದಿ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಶ್ರೀ ರುದ್ರೇಶ್ವರ ಮಠದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ (ರಿ) ಬೆಂಗಳೂರು ಹಾಗೂ ಜಿಲ್ಲಾ ಘಟಕ ವಿಜಯಪುರ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ನಿಡಗುಂದಿ ತಾಲೂಕು ಘಟಕದ ಚುನಾವಣಾ ದೃಢೀಕರಣ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮಲ್ಲಯ್ಯ ಸಾಲಿಮಠ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ನಿಡಗುಂದಿ ತಾಲೂಕು ಘಟಕದ ಚುನಾವಣಾ ದೃಢೀಕರಣ ಪ್ರಮಾಣಪತ್ರ ವಿತರಣಾ ಸಮಾರಂಭದಲ್ಲಿ ಪಟ್ಟಣದ ಹಿರಿಯನೇಕರು ಪಾಲ್ಗೊಂಡಿದ್ದರು.

ಜಿಲ್ಲಾ ಘಟಕದ ಅಧ್ಯಕ್ಷರಾದ ವಿ.ಸಿ.ನಾಗಠಾಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಟಿ.ಈಶ್ವರಗೊಂಡ, ಕಾರ್ಯಕಾರಿಣಿ ಸದಸ್ಯ ವಿಜಯ ಹುಂಡೇಕಾರ, ಸಂಘಟನಾ ಕಾರ್ಯದರ್ಶಿ ಬಸವರಾಜಕುಮಾರ್ ಕುಮಸಗಿ, ಸಿ.ಎಸ್. ಕನಕಾಲ್ಮಠ, ರಾಮನಗೌಡ ಹೆಬ್ಬಾಳ, ಮಾಜಿ ಜಿಪಂ ಸದಸ್ಯ ಶಿವಾನಂದ ಅವಟಿ ಇವರ ಸಮ್ಮುಖದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ನಿಡಗುಂದಿ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷರಾಗಿ ಮಲ್ಲಯ್ಯ ಸಾಲಿಮಠ ಅವರನ್ನು ಆಯ್ಕೆ ಮಾಡಲಾಯಿತು. ಇವರ ಜೊತೆಗೆ ಏಳು ಜನ ಮಹಿಳಾ ಘಟಕದ, ಹದಿಮೂರು ಜನ ಪುರುಷರು ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯರನ್ನಾಗಿ ಅವಿರೋಧವಾಗಿ ಆಯ್ಕೆಯಾದರು. ಹೊಸದಾಗಿ ಆಯ್ಕೆಗೊಂಡ ಸದಸ್ಯರಿಗೆ ಚುನಾವಣಾ ಅಧಿಕೃತ ಪತ್ರವನ್ನು ವಿತರಿಸಿ ಸನ್ಮಾನಿಸಲಾಯಿತು.

ಚಂದ್ರಶೇಖರ ನಿಡಗುಂದಿ ಸ್ವಾಗತಿಸಿದರು. ಶಿಕ್ಷಕ ವಾಗ್ಮಿ ಬಸವರಾಜ ಹಂಚಲಿ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ಉಪನ್ಯಾಸಕ ಪ್ರಕಾಶ ವೈ.ಧನಶೆಟ್ಟಿ ಆಭಾರಮನ್ನಿಸಿದರು.

# ಪ್ರಜಾಪ್ರಭುತ್ವದ ಬಲವರ್ಧನೆಗೆ ಎಸ್‌ಐಆರ್ ಯಶಸ್ವಿ ಅಗತ್ಯ :ರಮೇಶ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಪ್ರಜಾಪ್ರಭುತ್ವದ ಬಲವರ್ಧನೆಗೆ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಯಶಸ್ವಿಗೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ರಮೇಶ ಮಸಬಿನಾಳ ಹೇಳಿದರು.

ತಾಲ್ಲೂಕಿನ ಮುಳಸಾವಳಗಿ ಗ್ರಾಮದಲ್ಲಿ ಗುರುವಾರ ಜರುಗಿದ ಬಿಎಲ್‌ಎ ನೇಮಕ ಹಾಗೂ ವಿಶೇಷ ತರಬೇತಿ ಕಾರ್ಯದಲ್ಲಿ ಮಹಾಶಕ್ತಿ ಕೇಂದ್ರದ ಸಭೆಯ ನೇತೃತ್ವ ವಹಿಸಿ ಮಾತನಾಡಿದರು.

ಬಿಜೆಪಿ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ಮನೆಮನೆಗೆ ತೆರಳಿ ಎಸ್‌ಐಆರ್ ಕಾರ್ಯಕ್ಕೆ ಸಹಕಾರ ನೀಡಬೇಕು. ಮ್ಯಾಪಿಂಗ್ ಕಾರ್ಯದಲ್ಲಿ ಮತದಾರರಿಗೆ ಸಹಾಯ ಮಾಡಬೇಕು. ಒಂದು ತಿಂಗಳು ಕಾಲ ನಡೆಯುವ ನಿರಂತರ ಪರಿಷ್ಕರಣೆ ಕಾರ್ಯದಲ್ಲಿ ಚುನಾವಣಾ ಆಯೋಗ ನೇಮಿಸಿದ ಬೂತ್ ಮಟ್ಟದ ಅಧಿಕಾರಿಗಳಿಗೆ(ಬಿಎಲ್‌ಓ) ಎಲ್ಲ ರೀತಿಯ ಸಹಕಾರ ನೀಡಬೇಕು ಎಂದರು.

ಬಿಜೆಪಿ ಘಟಕದ ಜಿಲ್ಲಾ ಉಪಾಧ್ಯಕ್ಷ ಪ್ರಭುಗೌಡ ಬಿರಾದಾರ(ಅಸ್ಕಿ) ಮಾತನಾಡಿ, ಅರ್ಹ ಮತದಾರ ಮತದಾನದಿಂದ ವಂಚಿತನಾಗಬಾರದು. ಪ್ರತಿಯೊಬ್ಬರು ಮತದಾರ ಪಟ್ಟಿಯಲ್ಲಿರುವಂತೆ ಕ್ರಮ ವಹಿಸಲು ಕಾರ್ಯ ನಿರ್ವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಮತದಾರರನ್ನು ಭೇಟಿ ಮಾಡಿ ವಿಶೇಷ ಪರಿಷ್ಕರಣೆ ಕುರಿತು ಜಾಗೃತಿ ಮೂಡಿಸಲಾಯಿತು.

ಮಹಾಶಕ್ತಿಕೇಂದ್ರದ ಅಧ್ಯಕ್ಷ ಬಸವರಾಜ ಕಲ್ಲೂರ, ಪ್ರಕಾಶ ದೊಡಮನಿ, ಶಂಕರಗೌಡ ಕೊಕಟನೂರ, ಮಹಾಂತೇಶ ನಾಗರಳ್ಳಿ, ಶಶಿಕಾಂತ ಹಿರೇಮಠ, ಶಿವಾನಂದ ಬಸರಕೋಡ, ಸುರೇಶ ಇಂಗಳಗಿ, ಸುರೇಶ ಬಿರಾದಾರ, ರಾಯಗೊಂಡ ಬಿರಾದಾರ, ಮಲ್ಲು ಪೋಲೇಶಿ, ಪ್ರಕಾಶ ನಾಯ್ಕೋಡಿ ಇದ್ದರು.

# ಸಮಾಜದ ಪರಿವರ್ತನೆಗೆ ಮಹಿಳಾ ಜಾಗೃತಿಯೊಂದೇ ಮಾರ್ಗ :ರಶ್ಮಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಶಿಕ್ಷಣದೊಂದಿಗೆ ವರದಕ್ಷಿಣೆ, ಬಾಲ್ಯವಿವಾಹ, ಬಾಲ ಕಾರ್ಮಿಕತೆ ಮೊದಲಾದ ಅನಿಷ್ಟಗಳನ್ನು ದೂರಮಾಡಿ. ಸಾಂತ್ವನ ಸಹಾಯವಾಣಿ ಕೇಂದ್ರವನ್ನು ಉತ್ತಮ ಉದ್ದೇಶಗಳಿಗೆ ಬಳಸಿಕೊಳ್ಳಬೇಕು ಎಂದು ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತೆ ರಶ್ಮಿ ನೂಲಾನವರ ಕರೆ ನೀಡಿದರು.ಸಿಂದಗಿ ನಗರದ ಚಂಡರಯ್ಯನ ಮಠದ ಬಳಿ ವಿಜಯಪುರದ ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಿಂದಗಿ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳ ಕಾರ್ಯಾಲಯ ಹಾಗೂ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಹಯೋಗದೊಂದಿಗೆ ಹಮ್ಮಿಕೊಂಡ ಮಹಿಳಾ ಜಾಗೃತಿ ಕಾರ್ಯಕ್ರಮದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದ ಪರಿವರ್ತನೆ ಹಾಗೂ ಅಭ್ಯುದಯಕ್ಕಾಗಿ ಮಹಿಳಾ ಜಾಗೃತಿಯೊಂದೇ ಮಾರ್ಗವಾಗಿದೆ. ತಮ್ಮ ಸಮಸ್ಯೆಗಳಿಗೆ ಸಿಂದಗಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಸದಾ ಸಿದ್ಧವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಿಬ್ಬಂದಿ ವಿದ್ಯಾ ದೇಸಾಯಿ, ವಾಣಿ ಹಿರೇಮಠ, ರೇಖಾ ಅರ್ಜುಣಗಿ, ವಿಶಾಲಾಕ್ಷಿ ಹುಲಗಬಾಳ, ಮೇಘಾ ಶುಂಠಿ, ಶಾಂತಾಬಾಯಿ ಹಿರೇಮಠ, ಮಲ್ಲಮ್ಮ ನಂದಿಕೋಲ, ಕಮಲಾ ಹಳ್ಳಿ, ಶೋಭಾ ಬಡಿಗೇರ, ಶರಣಮ್ಮ ಕುರನಳ್ಳಿ, ಜಯಶ್ರೀ ಬಡಿಗೇರ, ಗುರುಬಾಯಿ ಯರಗಲ್, ಅಂಬಿಕಾ ಕುಲಕರ್ಣಿ, ಬೋರಮ್ಮ ಕುರನಳ್ಳಿ ಭಾಗೀರಥಿ ಬಡಿಗೇರ, ಎ.ಎಚ್.ಆಶಾ ಸೇ-ರಿದಂತೆ ಅನೇಕರು ಇದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR